ಮಂಡನೆಗೆ ಅನುಮತಿ ಕೋರಿಕೆ

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 2001 ರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ

2001ರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ(ಬಾಕಿಗಳ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯಸಚಿವರು) :— ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ II**

8. ವಿತ್ತೀಯ ಕಾರ್ಯಕಲಾಪಗಳು

2001-2002ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಕೃಷಿ, ತೋಟಗಾರಿಕೆ, ಆರೋಗ್ಯ ಮತ್ತು ಇವರ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೆ, ಕೃಷಿ, ತೋಟಗಾರಿಕೆ, ಆರೋಗ್ಯ ಮತ್ತು ಇತರೆ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಿಂದ ಜಾಸ್ತಿಯಾಯಿತು. ಪಟ್ಟಣಗಳು ಯಾವ ರೀತಿ ಬೆಳೆದಿವೆ, ಪಟ್ಟಣಗಳಲ್ಲಿ ಏನು ಅನುಕೂಲಗಳು ಆಗಿವೆ, ಪಟ್ಟಣದಲ್ಲಿರತಕ್ಕಂಥ ಸಾರ್ವಜನಿಕರಿಗೆ ಏನೇನು ಅನುಕೂಲಗಳಾಗಿವೆ ಹಾಗೆಯೇ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ, ರೈತರು ವಾಸ ಮಾಡುತ್ತಿರತಕ್ಕಂಥ ಪ್ರದೇಶದಲ್ಲಿ ಏನೇನು ಅನುಕೂಲಗಳನ್ನು ಪದೇ ಪದೇ ಬಂದಂಥ ಸರ್ಕಾರಗಳು ಏನು ಮಾಡಿದೆ ಎನ್ನುವುದರ ಬಗ್ಗೆ ಈ ಸರ್ಕಾರ ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

5.20 ಪಿ.ಎಂ.

ಹಳ್ಳಿ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸಗಳಾಗಲಿ, ಅನುಕೂಲತೆಗಳಾಗಲಿ, ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಈ ದೇಶದಲ್ಲಿ ಸುಮಾರು 70 ರಿಂದ 75 ಭಾಗದಷ್ಟು ವ್ಯವಸಾಯಗಾರರು ಇರುವ ದೇಶವಾಗಿದೆ. ಯಾವುದಾದರೂ ದೇಶದಲ್ಲಿ ಸಮೃದ್ಧಿಯಾಗಿ ಆ ದೇಶದಲ್ಲಿ ಶಾಂತಿ ನೆಮ್ಮದಿ ನೆಲಸಬೇಕಾದರೆ, 75 ಭಾಗದಷ್ಟು ಇರುವ ರೈತರಿಗೆ, ಆರ್ಥಿಕಾಭಿವೃದ್ಧಿಯಾಗಬೇಕು, ಇವರ ಮಕ್ಕಳಿಗೆ ಸೂಕ್ತವಾದ ವಿದ್ಯಾಭ್ಯಾಸ ಲಭ್ಯವಾಗಬೇಕು, ಅವರು ವಾಸ ಮಾಡತಕ್ಕಂಥ ಪ್ರದೇಶಗಳಲ್ಲಿ ನಗರ ಪ್ರದೇಶಗಳಲ್ಲಿ ದೊರೆಯುವ ಅನುಕೂಲಗಳು ಇವರಿಗೂ ಕೂಡ ಲಭ್ಯವಾಗಬೇಕು. ಕೆಲವು ಸಂದರ್ಭದಲ್ಲಿ ಯೋಚಿಸಿದಾಗ, ಈ ದೇಶದಲ್ಲಿ ರೈತನಾಗಿ ಹುಟ್ಟುವುದೇ ಒಂದು ದೊಡ್ಡ ಅಪರಾಧವೆ? ಏನು ಪಾಪ ಮಾಡಿದ್ದಕೋಸ್ಕರ ಈ ದೇಶದಲ್ಲಿ ರೈತನಾಗಿ ಹುಟ್ಟಬೇಕು? ಇಂಥ ಭಾವನೆ ಬರುವ ವಾತಾವರಣ ಇಂದು ಸೃಷ್ಟಿಯಾಗಿದೆ. ಕೆಲವು ಸಂದರ್ಭದಲ್ಲಿ ಮಳೆ ಚೆನ್ನಾಗಿ ಬಂದು ಬೆಳೆ ಬಂದಾಗಲೂ ಕೂಡ ಸರಿಯಾದ ಬೆಲೆ ಸಿಗದೆ ಪಶ್ಚಾತ್ತಾಪ ಪಡುತ್ತಾನೆ, ಮತ್ತೆ ಕೆಲವು ಸಂದರ್ಭದಲ್ಲಿ ಮಳೆ ಬಾರದೆ ಬೆಳೆ ಇಲ್ಲದೆ ಇರುವ ಸಂದರ್ಭದಲ್ಲಿ ಕೂಡ ರೈತ ಪಶ್ಚಾತ್ತಾಪ ಪಡುತ್ತಾನೆ. ಇದು ಈ ದೇಶದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದೆ. ನಿಶ್ಚಿಂತೆಯಿಂದ ರೈತ ಇರಬೇಕಾದರೆ ಸಕಾಲದಲ್ಲಿ ಹಣ, ಸಾಲ, ಉತ್ತಮವಾದ ಬೀಜ, ಗೊಬ್ಬರ ಇವೆಲ್ಲವನ್ನೂ ಕೊಡಬೇಕಾಗುತ್ತದೆ.

ಅಧ್ಯಕ್ಷರು :— ಮಾನ್ಯ ನಾಡಗೌಡರವರೇ, ನಾವು ಈಗೇನು ಬೇಡಿಕೆಗಳನ್ನು ಮಂಡಿಸಿದ್ದೇವೆ ಸಂಬಂಧಪಟ್ಟ ಸಚಿವರು ಕೊನೇಪಕ್ಷ ನಾಳೆಯಾದರೂ ಆ ಸಮಯಕ್ಕೆ ಸದನಲ್ಲಿರುವಂತೆ ಏರ್ಪಾಡು ಮಾಡಿ.

ಶ್ರೀ ಕೆ.ಹೆಚ್. ಹನುಮೇಗೌಡ :— ಇಂಥ ಸಲಕರಣೆಗಳನ್ನು ಯಾವುದೇ ವಿಧವಾದ ತೊಂದರೆ ಇಲ್ಲದೆ ಸಕಾಲದಲ್ಲಿ ಸರ್ಕಾರ ರೈತರಿಗೆ ಒದಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಸಹಕಾರ ಇಲಾಖೆ ಇರುವುದೇ ಈ ರೈತರ ಶ್ರೇಯೋಭಿವೃದ್ಧಿಗಾಗಿ, ಆದರೆ ನಿರೀಕ್ಷಿತ ಮಟ್ಟದಲ್ಲಿ ಈ ಇಲಾಖೆಯಿಂದ ರೈತರಿಗೆ ಪ್ರಯೋಜನ ದೊರಕುತ್ತಿಲ್ಲ. ಪಾಶ್ಚಿಮಾತ್ಯ ಹಾಗೂ ಮುಂದುವರೆದ ಅಮೇರಿಕಾ ಇಂಥ ದೇಶಗಳಲ್ಲಿ ರೈತನ ಒಂದೇ ಒಂದು ಸಮಸ್ಯೆ ಏನೆಂದರೆ, ಅವನು ಬೆಳೆ ಬೆಳೆಯುವುದು. ಮಾರಾಟ ಮಾಡುವುದಾಗಲಿ ಅಥವಾ ಬೆಲೆ ಕುಸಿತಗೊಂಡಾಗ ಪರಿಹಾರ ಪಡೆಯಲಿಕ್ಕೆ ಆಗಲಿ, ರೈತ ಹೆಚ್ಚು ಯೋಚನೆ ಮಾಡುವಂಥ ಅವಕಾಶ ಅಲ್ಲಿ ಇಲ್ಲ. ರೈತ ಬೆಳೆಗಳನ್ನು ಬೆಳೆದಾದ ಮೇಲೆ ಸಹಕಾರಿ ಸಂಘದ ಗೋದಾಮುಗಳಲ್ಲಿ ಹಾಕುತ್ತಾನೆ, ಸ್ವಲ್ಪ ಏನಾದರೂ ತೇವಾಂಶ ಇದ್ದರೆ ಅದನ್ನು ಒಣಗಿಸುತ್ತಾರೆ, ನಂತರ ಸೊಸೈಟಿಯಿಂದ ರೈತನಿಗೆ ದೂರವಾಣಿ ಮಾಡಿ, ನಿನ್ನ ದಾಸ್ತಾನು ಇಷ್ಟು ಬಂದಿದೆ, ಇಷ್ಟು ರೇಟ್ ಇದೆ ಮಾರಾಟ ಮಾಡಬೇಕೇ ಬೇಡವೇ ಎಂದು ಕೇಳಿದಾಗ ಸದರಿ ರೈತ ಒಪ್ಪಬಹುದು ಅಥವಾ ಬಿಡಬಹುದು. ಒಂದು ಪಕ್ಷ ರೈತ ಒಪ್ಪಿದಾಗ ಮಾರಾಟ ಮಾಡಿ

ಅವನ ಅಕೌಂಟ್‌ಗೆ ಆ ಹಣವನ್ನು ಕಟ್ಟುತ್ತಾರೆ. ಅಲ್ಲಿ ಆರು ತಿಂಗಳಿಗಿಂತ ಮೊದಲೇ ಅಂದರೆ ಮುಂದಿನ ವರ್ಷಕ್ಕೆ ಇಂಥ ಬೆಳೆಗೆ ಇಂತಿಷ್ಟು ರೇಟ್ ಎಂದು ಮೊದಲೇ ಫಿಕ್ಸ್ ಮಾಡಿರುತ್ತಾರಂತೆ, ಒಂದು ಪಕ್ಷ ರೇಟ್ ಕಡಿಮೆಯಿದ್ದಾಗ, ರೈತ ಒಪ್ಪಿಕೊಂಡ ನಂತರ ಅವನ ಬೆಳೆಯನ್ನು ಮಾರಿದ ಮೇಲೆ ಬರುವ ವ್ಯತ್ಯಾಸದ ಹಣವನ್ನು ಆ ಸೊಸೈಟಿಯವರೇ ಸರ್ಕಾರದಿಂದ ಕ್ಲೇಮ್ ಮಾಡಿ ಅವನ ಅಕೌಂಟ್‌ಗೆ ಕಟ್ಟುತ್ತಾರಂತೆ. ಇಂಥ ವ್ಯವಸ್ಥೆ ಆ ದೇಶಗಳಲ್ಲಿದ್ದು, ಹಣದ ವಿಚಾರದಲ್ಲೂ ಕೂಡ ಆ ರೈತನಿಗೆ ಕ್ರೆಡಿಟ್ ಕಾರ್ಡ್ ಕೊಟ್ಟಿದ್ದು, ಅವನು ಯಾವಾಗ ಬೇಕಾದರೂ ದುಡ್ಡು ತೆಗೆದುಕೊಳ್ಳಬಹುದು ಇಲ್ಲವೆ ಡ್ರಾ ಮಾಡಿಕೊಳ್ಳಬಹುದು, ಒಟ್ಟಾರೆ ಅವನ ಆಸ್ತಿಯ ಅರ್ಧ ಭಾಗದಷ್ಟು ಮೌಲ್ಯದ ಕ್ರೆಡಿಟ್ ಕಾರ್ಡ್ ಏನು ಕೊಟ್ಟಿರುತ್ತಾರೆ ಅದನ್ನು ಅವರು ಐದು ವರ್ಷಗಳಿಗೊಮ್ಮೆ ರಿನ್ಯೂವಲ್ ಮಾಡಿಸಬೇಕಂತೆ. ಹೀಗಾಗಿ ಅಲ್ಲಿಯ ರೈತನಿಗೆ ಯಾವುದೇ ರೀತಿಯಿಂದಲೂ ಹಣದ ಕೊರತೆ ಇಲ್ಲ ಮಾರಾಟಕ್ಕಾಗಿ ಸೂಕ್ತ ವ್ಯವಸ್ಥೆಯಿದ್ದು, ಇದರ ಜೊತೆಗೆ ರೈತನಿಗೆ ಯಾವ ರೀತಿಯಾದ ದೋಖ ಆಗದೆ, ಸಕಾಲಕ್ಕೆ ಉತ್ತಮವಾದ ಬೀಜ, ಗೊಬ್ಬರ, ಒದಗಿಸುವಂಥ ವ್ಯವಸ್ಥೆ ಇದೆ. ಇಂಥ ಪರಿಸ್ಥಿತಿ ನಮ್ಮ ದೇಶಕ್ಕೆ ಬಂದಾಗ ಮಾತ್ರ ನಮ್ಮ ದೇಶದ ರೈತ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿದೆ. ಈ ದೇಶದ ರೈತನಿಗೆ ಮುಖ್ಯವಾಗಿ ಇರುವ ತೊಂದರೆ ಏನು ಎಂದರೆ ಅವನು ಬೆಳೆದಿರುವ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇದೊಂದು ದೊಡ್ಡ ನ್ಯೂನತೆ, ಅವನು ಬೆಳೆದಿರುವ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇದೊಂದು ದೊಡ್ಡ ನ್ಯೂನತೆ, ಅವನು ಎಷ್ಟೇ ಶ್ರಮ ವಹಿಸಿ ದುಡಿದರೂ ಕೂಡ ಅವನು ಆರ್ಥಿಕವಾಗಿ ತೊಂದರೆಗೆ ಈಡಾಗುತ್ತಾನೆ. ಈಗ ನೀವು ಯಾವುದೇ ಹಳ್ಳಿಯಲ್ಲಿರುವ ರೈತನ ಒಟ್ಟು ಆಸ್ತಿಗಿಂತ ಅವನು ಬ್ಯಾಂಕ್ ಮತ್ತು ಇತರೆ ಸಹಕಾರ ಸಂಘಗಳಿಂದ ತೆಗೆದುಕೊಂಡಿರುವ ಸಾಲದ ಪ್ರಮಾಣ ಜಾಸ್ತಿ ಇದೆ ಬೇಕಾದರೆ ನೀವು ಸರ್ವೆ ಮಾಡಿಸಿ. ಏಕೆಂದರೆ, ಅವನು ಬೆಳೆದಿರುವ ಬೆಳೆಗೆ ಸರಿಯಾದ ಬೆಲೆ ಸಿಗದೆ ಅವನಿಗೆ ಸಾಲ ತೀರಿಸುವ ಚೈತನ್ಯ ಇಲ್ಲ, ಹೀಗಾಗಿ ಅವನು ಸದಾ ತೊಂದರೆಯಲ್ಲಿರುತ್ತಾನೆ. 1960ನೇ ಇಸವಿ ಎಂದು ಒಂದು ಕಟ್ ಆಫ್ ಡೇಟ್ ತೆಗೆದುಕೊಂಡು ರೈತನು ತೆಗೆದುಕೊಳ್ಳುತ್ತಿದ್ದ ಗುದ್ದಲಿ, ನೇಗಿಲು, ಇತರೆ ಸಲಕರಣೆಗಳ ಬೆಲೆ ಆಗ ಎಷ್ಟು ಇತ್ತು ಎಂಬುದನ್ನು ಪರಿಶೀಲಿಸಿ, ಅದೇ ರೀತಿ ಆ ವರ್ಷದಲ್ಲಿ ಅವನು ಮಾರತಕ್ಕಂಥ ವಸ್ತುಗಳ ಬೆಲೆ ಎಷ್ಟು ಇತ್ತು ಎಂಬುದನ್ನು ಪರಿಶಲೀಸಿದಾಗ ಏನು ವ್ಯತ್ಯಾಸ ಇದೆ ಎಂಬುದು ಗೊತ್ತಾಗುತ್ತದೆ. ದುರ್ದೈವದ ಸಂಗತಿ ಏನೆಂದರೆ, ಈ ದೇಶದಲ್ಲಿ ರೈತ ಮಾರತಕ್ಕಂಥ ವಸ್ತುಗಳ ಬೆಲೆ ಪಾತಾಳಕ್ಕೆ ಇಳಿದಿದ್ದರೆ, ಅವನು ಕೊಂಡುಕೊಳ್ಳುವ ಬೆಲೆ ಮಾತ್ರ ಗಗನಕ್ಕೆ ಏರುತ್ತಿದೆ. ಈ ರೀತಿ ಎರಡಕ್ಕೂ ಹೋಲಿಕೆ ಇಲ್ಲದಿರುವುದರಿಂದ ಇವತ್ತು ಅವನು ಆರ್ಥಿಕವಾಗಿ ಸರ್ವನಾಶವಾಗಿದ್ದಾನೆ. ಒಂದೊಂದು ಹೋಬಳಿಯಲ್ಲಿ ಕೋಟಿಗಟ್ಟಲೆ ಸಾಲ ಮಾಡಿಕೊಂಡು ತೀರಿಸುವ ಶಕ್ತಿ ಇಲ್ಲದೆ ಇಂದು ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇತ್ತೀಚೆಗೆ

ಏನಾಗಿದೆ ಎಂದರೆ ರೈತ ತಾನು ಸಾಯುವುದಲ್ಲದೆ, ತನ್ನ ಮಗು, ತನ್ನ ಹೆಂಡತಿಯನ್ನು ಸಾಯಿಸಿ ತಾನು ಕೊನೆಗೆ ನೇಣು ಹಾಕಿಕೊಳ್ಳುವ ಪ್ರಸಂಗಗಳು ಇವೆ ಎಂದು ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಇಂಥ ಹೀನಾಯ ಸ್ಥಿತಿಗೆ ಬರಬೇಕಾದರೆ ಅವನ ಮನೋಸ್ಥಿತಿ ಯಾವ ರೀತಿ ಇರಬೇಕು ಎಂಬುದನ್ನು ತಾವು ಸ್ವಲ್ಪ ಯೋಚಿಸಿ, ಯಾವ ಮನುಷ್ಯನಾಗಲಿ ಅವನು ಹುಟ್ಟಿಮೇಲೆ ತನ್ನ ಪ್ರಾಣ ಕಳೆದುಕೊಳ್ಳಬೇಕೆಂದರೆ ಯಾರೂ ಕೂಡ ಇಚ್ಛೆ ಪಡುವುದಿಲ್ಲ, ಆದರೆ, ತಾನು ಹಾಗೂ ತನ್ನ ಕುಟುಂಬದ ಎಲ್ಲರನ್ನೂ ಸಾಯಿಸಿ ತಾನು ಸಾಯಬೇಕೆಂದರೆ ಅವನ ಪರಿಸ್ಥಿತಿ ಏನಿತ್ತು ಎಂಬುದನ್ನು ಸರ್ಕಾರದವರು ದಯಮಾಡಿ ಯೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಪರಿಹಾರ ಕೊಡುತ್ತೇವೆಂದು ಹೇಳುತ್ತೀರಿ, ಆದರೆ ಈ ಪರಿಹಾರ ತೆಗೆದುಕೊಳ್ಳುವುದಕ್ಕಾಗಿಯೇ, ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುವುದಿಲ್ಲ. ಮೊದಲು ಇಂಥ ಪರಿಸ್ಥಿತಿ ಇರುತ್ತಿರಲಿಲ್ಲ, ಆದರೆ ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂದರೆ, 8-10ದಿವಸಕ್ಕೆ ಒಂದೊಂದು ವರದಿ ಇದ್ದೇ ಇರುತ್ತದೆ. ಆದ್ದರಿಂದ, ರೈತನ ಆರ್ಥಿಕ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಗಮನ ಕೊಟ್ಟು, ಅವನು ಇತರ ಜನಗಳ ಹಾಗೆ ನೆಮ್ಮದಿಯಿಂದ ಒಳ್ಳೆಯ ವಾತಾವರಣದಲ್ಲಿ ಬಾಳಿ ಬದುಕುವಂತೆ ಮಾಡಬೇಕು. ನಾನು ಮೂಲತಃ ಒಬ್ಬ ವ್ಯವಸಾಯಗಾರನಾಗಿದ್ದು ನಾನೂ ಕೂಡ ವ್ಯವಸಾಯಗಾರರ ಕುಟುಂಬದಿಂದ ಬಂದಿದ್ದು, 1960 ನೇ ಇಸವಿಯಲ್ಲಿ ರೈತ ಉಪಯೋಗಿಸುವ ಒಂದು ಗುದ್ದಲಿ ಬೆಲೆ ಆಗ 5 ರೂಪಾಯಿ, ಆಗ ರಾಗಿ 150 ರೂಪಾಯಿ ಇದ್ದು ಈಗ ಮೂನ್ನೂರು ರೂಪಾಯಿ ಇರಬಹುದು, ಅಕ್ಕಿ ಆಗ 250 -300 ರೂಪಾಯಿ ಇದ್ದು ಈಗ 700-800 ರೂಪಾಯಿ ಇರಬಹುದು, ಆದರೆ, ಗುದ್ದಲಿ ಇವತ್ತಿನ ಬೆಲೆ 80-90 ರೂಪಾಯಿ ಆದರೆ ಎಷ್ಟು ಮತ್ತು ಪಟ್ಟು ಜಾಸ್ತಿಯಾಯಿತು ನೀವೇ ಲೆಕ್ಕ ಹಾಕಿ. ಮತ್ತೊಂದು ದುರ್ದೈವದ ಸಂಗತಿ ಏನೆಂದರೆ, ಈ ಬಡಪಾಯಿ ರೈತ ಬೆಳೆದಂಥ ಪದಾರ್ಥಗಳಿಗೆ ಲೆವಿ ಕೊಡಬೇಕು, ಏಕೆ ಕೊಡಬೇಕು? ಈ ದೇಶದಲ್ಲಿರುವ ವರ್ತಕರು ಲೆವಿ ಕೊಡುತ್ತಾರೆಯೇ? ಫ್ಯಾಕ್ಟರಿಯವರು ಲೆವಿ ಕೊಡುತ್ತಾರೆಯೇ? ಯಾವ ವರ್ಗದ ಜನ ಕೊಡುತ್ತಾರೆ? ಅಸಹಾಯಕರಾದಂಥ, ಸಂಘಟನೆ ಇಲ್ಲದೆ ಇರುವ ರೈತರು ಬೆಳೆದ ಪದಾರ್ಥಗಳಿಗೆ ಕಡಿಮೆ ರೇಟ್ ಹಾಕಿ, ಲೆವಿ ವಸೂಲಿ ಮಾಡುವಂಥ ಪದ್ಧತಿ ಕೂಡ ಇದೆ. ಎಲ್ಲೋ ಬೋರು, ಅಥವಾ ಎಲ್ಲೋ ನೀರಿಗೆ ಒಂದು ಮೆಷಿನ್ ಇಟ್ಟು ಕ್ಲೀನ್ ಮಾಡಬಹುದೇನೋ ಒಂದು ಲೀಟರ್ ನೀರಿನ ಬೆಲೆ 12 ರಿಂದ 15 ರೂಪಾಯಿ, ಆದರೆ ರೈತ ಸಾಲ ಪಡೆದು ಎಮ್ಮೆ, ಹಸು, ಕೊಂಡುಕೊಂಡು ಅದನ್ನು ಸಾಕಿ, ಹುಲ್ಲು ಹಾಕಿ ಎಲ್ಲಾ ವ್ಯವಸ್ಥೆ ಮಾಡಿ ಅವನು ಅದರಿಂದ ಒಂದು ಲೀಟರ್ ಹಾಲು ಮಾರಬೇಕಾದರೆ ಅವನಿಗೆ ಸಿಗುವುದು ಕೇವಲ 7 ರೂಪಾಯಿ ಇದು ಧರ್ಮವೇ? ತಾವು ದಯಮಾಡಿ ಇದರ ಬಗ್ಗೆ ಯೋಚಿಸಿ. ಹಾಲಿಗೆ ಸ್ವಲ್ಪ ರೇಟ್ ಜಾಸ್ತಿ ಕೊಡಬೇಕೆಂದು ಹೇಳಿದರೆ ಎಲ್ಲಾ ವರ್ಗದವರಿಂದ ವಿರೋಧ ಬರುತ್ತದೆ. ಆದರೆ ಇಂಥ ಪದಾರ್ಥಗಳು ಅಂದರೆ, ನೀರಿಗೆ 15 ರೂಪಾಯಿ ಅಂದರೆ

ಅವರನ್ನು ಹೇಳುವವರು ಕೇಳುವವರೂ ಯಾರೂ ಇಲ್ಲವೆ? ಮಾನ್ಯ ಮುಖ್ಯಮಂತ್ರಿಗಳು ತಾವು ದಯಮಾಡಿ ಕೇಳಿ, ಒಂದು ಲೀಟರ್ ನೀರಿಗೆ ಸುಮಾರು 2-3 ರೂಪಾಯಿ ಖರ್ಚು ಬೀಳುತ್ತದೆಯಂತೆ, ಅವನು ಅದನ್ನು ತಂದು ಏನೇನೋ ಮಾಡಿ ಲೇಬಲ್ ಅಂಟಿಸಿ ಕೊಟ್ಟರೆ ಒಟ್ಟು ಮೂರು ರೂಪಾಯಿ ಬೀಳಬಹುದು. ಅದಕ್ಕೆ 15 ರೂಪಾಯಿ ಎಂದು ಹೇಳುತ್ತಾನಲ್ಲಾ ಅವನ ಮೇಲೆ ಸರ್ಕಾರದವರು ಏಕೆ ಕಂಟ್ರೋಲ್ ಮಾಡಬಾರದು? ಈ ವ್ಯವಹಾರವನ್ನು ದೊಡ್ಡ ದೊಡ್ಡವರು ಭಾರಿ ಭಾರಿಯವರೆಲ್ಲಾ ಕೈಹಾಕಿದ್ದಾರೆ.

(ಈ ಹಂತದಲ್ಲಿ ಮಾನ್ಯ ಯು.ಆರ್. ಸಭಾಪತಿಯವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇದನ್ನು ಏಕೆ ನಿಯಂತ್ರಣ ಮಾಡುತ್ತಿಲ್ಲ? ಒಬ್ಬ ರೈತ ಅಧಿಕಾರಿಯನ್ನು ಅಪಾಯಿಂಟ್ ಮಾಡಿ ಎಷ್ಟು ಇನ್‌ವೆಸ್ಟ್ ಮಾಡಿದ್ದಾನೆ ಮತ್ತು ಇದಕ್ಕೆ ಎಷ್ಟು ಬಡ್ಡಿ ಆಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಿ ಆತನಿಗೆ 15 ಪರ್ಸೆಂಟ್ ನಷ್ಟು ಲಾಭ ಕೊಟ್ಟು ಒಂದು ರೇಟ್ ಫಿಕ್ಸ್ ಮಾಡಿ. ಕಾರ್ಖಾನೆಯಲ್ಲಿ ಉತ್ಪಾದನೆ ಮಾಡತಕ್ಕಂಥ ಸಿಮೆಂಟ್ ಅಥವಾ ಗೊಬ್ಬರದ ರೇಟ್ ಬಗ್ಗೆ ನೀವ್ಯಾರೂ ಮಾತನಾಡುತ್ತಿಲ್ಲ. ಇವತ್ತಿನ ದಿವಸ ರೈತ ಉತ್ಪಾದನೆ ಮಾಡತಕ್ಕಂಥ ವಸ್ತುಗಳಿಗೆ ಲೆವಿ ಹಾಕಿ ಇಷ್ಟೇ ಕೊಡಬೇಕೆಂದು ನೀವು ಬಲವಂತ ಮಾಡುತ್ತಿದ್ದೀರಿ. ನಮ್ಮ ದೇಷದ ರೈತ ಏನು ಪಾಪ ಮಾಡಿದ್ದಾನೆ? ಇವತ್ತಿನ ದಿವಸ ಹೊಟ್ಟೆಗೆ ಇಲ್ಲದಂಥ ರೈತನಿಗೆ ನೀವು ಬಲವಂತ ಮಾಡುತ್ತೀರಿ. ಆದರೆ ಕೋಟಿಗಟ್ಟಲೆ ಸಂಪಾದನೆ ಮಾಡತಕ್ಕಂಥ ಕೈಗಾರಿಕೆಗಳ ಮಾಲೀಕರಿಗೆ ಏಕೆ ನಿರ್ಬಂಧನೆ ಹಾಕುತ್ತಿಲ್ಲ? ಸನ್ಮಾನ್ಯ ನರಸಿಂಹರಾಯರು ನಮ್ಮ ದೇಶದ ಪ್ರಧಾನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಏನೇನು ಮಾಡಿದ್ದಾರೆಂಬುದು ಈಗ ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ, ಇವರು ಈಗ ಸ್ವಲ್ಪ ನೆಮ್ಮದಿಯಿಂದ ಇದ್ದಾರೆ. ಹಿಂದೆ ಒಂದು ಮೂಟೆ ಸಿಮೆಂಟ್‌ಗೆ 60 ರೂಪಾಯಿ ಇದ್ದಾಗ ಬಡಬಗ್ಗರು ಒಂದೊಂದು ಮನೆ ಕಟ್ಟಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಇದನ್ನು ತೆಗೆದರು. ಆ ನಂತರ ಡೀ-ಕಂಟ್ರೋಲ್ ಮಾಡಿದಾಗ ಇವತ್ತಿನ ದಿವಸ ಒಂದು ಮೂಟೆ ಸಿಮೆಂಟ್ 160 ರಿಂದ 170ರ ವರೆಗೆ ಆಗಿದೆ. ಇದಕ್ಕೆ ಎಷ್ಟು ಬೀಳುತ್ತದೆ, ಎಷ್ಟು ಲಾಭ ತೆಗೆದುಕೊಳ್ಳುತ್ತಿದ್ದಾರೆಂದಿ ತಾವು ಪರಿಶೀಲನೆ ಮಾಡಿದ್ದೀರಾ? ಇವತ್ತಿನ ದಿವಸ ಕೈಗಾರಿಕೆಯಲ್ಲಿ ಉತ್ಪಾದನೆ ಮಾಡತಕ್ಕಂಥ ಪ್ರತಿಯೊಂದು ವಸ್ತುವಿಗೆ ಆತ ಎಷ್ಟು ಬೇಕಾದರೂ ರೇಟ್ ಹಾಕಿಕೊಳ್ಳಬಹುದಾಗಿದೆ. ಇವತ್ತಿನ ದಿವಸ ಒಂದಲು ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಸುಮಾರು 500 ರಿಂದ 1000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಕೈಗಾರಿಕೆಯನ್ನು ಪ್ರಾರಂಭಮಾಡಿ, ಇದರಿಂದ ಬಂದಂಥ ಹಣವನ್ನು ಸ್ವಂತಕ್ಕೆ ಉಪಯೋಗ ಮಾಡಿ ಆರೇಳು ತಿಂಗಳಾದ ಮೇಲೆ ಕಂಪನಿ ನಷ್ಟ ಆಯಿತೆಂದು ಕೈಗಾರಿಕೆಯನ್ನು ಮುಚ್ಚಿಕೊಂಡು ಬೇರೆ ಊರಿಗೆ ಹೋಗಿ ಹೆಂಡತಿ ಅಥವಾ ಮಕ್ಕಳ ಹೆಸರಿನಲ್ಲಿ ಪುನ: ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ಈ

ರೀತಿಯಾದ ವ್ಯವಸ್ಥೆಯಿಂದ ಮತ್ತು ಹಣದ ದುರ್ವ್ಯವಹಾರದಿಂದ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟಿರುವಾಗ ಈ ಸರ್ಕಾರ ಅವರ ಕಡೆ ತಿರುಗಿಯೂ ಕೂಡ ನೋಡುತ್ತಿಲ್ಲ. ಹೊಟ್ಟೆಗೆ ಇಲ್ಲದಂಥ ರೈತ ಇವತ್ತು ನೇಣು ಹಾಕಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಟಾಟಾ ಮತ್ತು ಬಿರ್ಲಾರವರು ಸುಮಾರು 20 ಸಾವಿರ ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಇವತ್ತಿನದಿವಸ ಅಂಥ ವ್ಯಕ್ತಿಗಳಿಂದ ಹಣ ದುಂದುವೆಚ್ಚ ಯಾವರೀತಿ ಆಗುತ್ತಿದೆ ಎಂಬುದರ ಬಗ್ಗೆ ಒಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹರಿಹರದಲ್ಲಿರತಕ್ಕಂಥ ಪಾಲಿ ಫೈಬರ್ ಕಂಪನಿಯ ಎಂ.ಡಿ. ಇವತ್ತಿನ ದಿವಸ ಬೊಂಗಳೂರಿಗೆ ಸ್ವಂತ ವಿಮಾನದಲ್ಲಿ ಬರುತ್ತಾನೆ. ಅಲ್ಲಿಂದ ಇಲ್ಲಿಗೆ ಬರುವುದಕ್ಕೆ ಒಳ್ಳೆಯ ರಸ್ತೆ ಇದ್ದರೂ ಕೂಡ ವಿಮಾನದ ಮೂಲಕ ಬಂದು ಅನಾವಶ್ಯಕವಾಗಿ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಇವರಿಗೆ ಯಾವುದೇ ರೀತಿಯ ನಿರ್ಬಂಧನೆ ಇಲ್ಲ. ಹಾಗೆಯೇ ಇವರಿಗೆ ಹೇಳುವವರು ಇಲ್ಲ ಮತ್ತು ಕೇಳುವವರು ಇಲ್ಲ. ಇವತ್ತಿನದಿವಸ ಟ್ರಾಕ್ಟರ್ ಮತ್ತು ಗೊಬ್ಬರ ಉತ್ಪಾದನೆ ಮಾಡತಕ್ಕಂಥ ಕೈಗಾರಿಕೆಗಳನ್ನು ಇವರೇ ಇಟ್ಟುಕೊಂಡಿದ್ದಾರೆ. ಇವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿ ಹೊರದೇಶಗಳಿಗೆ ಹೋಗಿ ಬರುವಂಥಾದ್ದು ಸಾಕಷ್ಟು ನಡೆಯುತ್ತಿದೆ. ಒಂದು ಕಡೆ ದೊಡ್ಡ ದೊಡ್ಡ ಶ್ರೀಮಂತ ವರ್ಗದವರು ದಿನೇದಿನೇ ಬೆಳೆಯುತ್ತಿದ್ದಾರೆ. ಆದರೆ ರೈತರ ಬಗ್ಗೆ ಚಿಂತನೆ ಮಾಡುವುದು ಬಹಳ ಕಡಿಮೆ. ಒಬ್ಬ ರೈತ ಮತ್ತು ಈತನ ಹೆಂಡತಿ ಹಾಗೂ ಮಕ್ಕಳು ನೇಣು ಹಾಕಿಕೊಂಡು ಸತ್ತಿದ್ದಾರೆಂದರೂ ಕೂಡ ನಾವು ಈ ವಿಷಯವನ್ನು ಅಷ್ಟೊಂದು ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ. ಮ್ಯಾಜಿಸ್ಟ್ರೇಟ್ ರವರಿಂದ ಎನ್‌ಕ್ವೈರಿ ಮಾಡಿ ಅವರಿಗೆ ಪರಿಹಾರ ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದಾಗ ನನಗೆ ತುಂಬಾ ನೋವಾಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾನು ಒಂದು ವೇಳೆ ನೇಣು ಹಾಕಿಕೊಂಡು ಸತ್ತೆನೆಂದು ತಿಳಿದುಕೊಳ್ಳಿ. ಈ ಸಂದರ್ಭದಲ್ಲಿ ನನ್ನ ಹೆಂಡತಿ ಮತ್ತು ಮಕ್ಕಳ ಮುಂದೆ ಬಂದು ನಿನ್ನ ಗಂಡ ಏಕೆ ಸತ್ತ ಎನ್ನತಕ್ಕಂಥ ಮಾತನ್ನು ಕೇಳುವಂಥ ಸಂದರ್ಭವನ್ನು ನೆನಸಿಕೊಂಡರೆ ನನಗೆ ಎಷ್ಟು ಸಂಕಟ ಆಗಬಹುದು? ಇದರ ಬಗ್ಗೆ ತಾವು ದಯವಿಟ್ಟು ಆಲೋಚನೆ ಮಾಡಬೇಕಾಗುತ್ತದೆ. ಈ ದೇಶದಲ್ಲಿ ಒಬ್ಬ ರೈತ ಹುಟ್ಟಿರತಕ್ಕಂಥದೆ ದೊಡ್ಡ ಅಪರಾಧವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಸಾಲವನ್ನು ಮರುಪಾವತಿ ಮಾಡದೇ ಇರತಕ್ಕಂಥ ರೈತನನ್ನು ಹಿಡಿದು ಒಳಗೆ ಹಾಕುತ್ತೀರಿ. ಈ ದೇಶದ ಕೋಟ್ಯಾಂತರ ರೂಪಾಯಿಗಳನ್ನು ದರೋಡೆ ಮಾಡಿರುವಂಥ ಎಷ್ಟು ಜನರನ್ನು ತಾವು ಜೈಲಿಗೆ ಕಳುಹಿಸಿದ್ದೀರಿ ಎಂಬುದನ್ನು ಹೇಳಿ. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ರೈತರಿದ್ದು, ಕೇವಲ ಐದಾರು ಪರ್ಸೆಂಟ್‌ನಷ್ಟು ಕೈಗಾರಿಕೋದ್ಯಮಿಗಳು ಇದ್ದಾರೆ. ಇಂಥ ಸ್ಥಿತಿಯಲ್ಲಿಯೂ ಕೂಡ ರೈತ ವರ್ಗದವರಿಗೆ ತಾರತಮ್ಯವನ್ನು ಮಾಡುತ್ತಿದ್ದೀರಿ. ಇವತ್ತಿನದಿವಸ ರೈತರ ಮಕ್ಕಳು

ವಿದ್ಯಾವಂತರಾಗಿದ್ದರೂ ಸಹ ಅವರಿಗೆ ಕೆಲಸ ಸಿಗುತ್ತಿಲ್ಲ. ಹಾಗೆಯೇ ಇವರು ಪ್ರತಿಭಾವಂತರಾಗುವುದಕ್ಕೂ ಸಹ ಅವಕಾಶ ಸಿಗುತ್ತಿಲ್ಲ. ಸಂವಿಧಾನದ ಪ್ರಕಾರ ಸರ್ವ ಸಮಾನತೆ ಎಂದು ತಾವು ಆಗಾಗ ಹೇಳುತ್ತಿದ್ದೀರಿ. ಇವತ್ತಿನ ದಿವಸ ಪಟ್ಟಣದಲ್ಲಿ ಮಗು ಹುಟ್ಟುವ ಮೊದಲೇ ಸುಮಾರು 25 ಸಾವಿರ ದಿಂದ 2 ಲಕ್ಷ ರೂಪಾಯಿಗಳಷ್ಟು ಕೊಟ್ಟು ಕಾನ್ವೆಂಟ್‌ಗೆ ಹೆಸರನ್ನು ರಿಜಿಸ್ಟರ್ ಮಾಡಿಸಿರುತ್ತಾರೆ. ಹಳ್ಳಿಯಲ್ಲಿ ಇರತಕ್ಕಂಥ ಮಕ್ಕಳಿಗೆ ಆರೇಳು ವರ್ಷ ಆಗಿದ್ದರೂ ಕೂಡ ಹಾಕಿಕೊಳ್ಳುವುದಕ್ಕೆ ಒಂದು ಬಟ್ಟೆ ಇರುವುದಿಲ್ಲ. ಇವರು ದನ ಮೇಯಿಸಿಕೊಂಡು ಮತ್ತು ಮನೆ ಕೆಲಸ ಹಾಗೂ ಉಪ ಕಸುಬುಗಳನ್ನು ಮಾಡಿಕೊಂಡು ಎಸ್.ಎಸ್.ಎಲ್.ಸಿಯಲ್ಲಿ 38 ಪರ್ಸೆಂಟ್ ತೆಗೆದುಕೊಂಡು ಪಾಸ್ ಮಾಡಿಕೊಂಡಿರುತ್ತಾರೆ. ಪಟ್ಟಣದಲ್ಲಿರತಕ್ಕಂಥ ಮಕ್ಕಳು ಕಾನ್ವೆಂಟ್‌ನಲ್ಲಿ ಓದಿಕೊಂಡು ಎಸ್‌ಎಸ್‌ಎಲ್‌ಸಿಯಲ್ಲಿ ಸುಮಾರು 90 ಪರ್ಸೆಂಟ್ ಅಂಕಗಳನ್ನು ತೆಗೆದುಕೊಂಡಿರುತ್ತಾರೆ. ಈ ಮಕ್ಕಳು ಪಟಪಟನೆ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಸಾಕು ನೀವು ಇವರಿಗೆ ಕೆಲಸ ಕೊಡುತ್ತೀರಿ. ಆದರೆ ಈ ದೇಶದಲ್ಲಿ ರೈತವರ್ಗದವರಲ್ಲಿ ಹುಟ್ಟಿರತಕ್ಕಂಥ ಮಕ್ಕಳು ಪರಿಸರವನ್ನು ಅರ್ಥ ಮಾಡಿಕೊಂಡು ಎಲ್ಲಾ ರೀತಿಯಲ್ಲೂ ಪ್ರತಿಭಾವಂತರಾಗಿದ್ದರೂ ಸಹ ಇವರಿಗೆ ಒಳ್ಳೆಯ ಪ್ರಾಶಸ್ತ್ಯ ಸಿಗುತ್ತಿಲ್ಲ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಎಲ್ಲರನ್ನೂ ದಡ್ಡರನ್ನೇ ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿಲ್ಲ. ಪ್ರತಿಭಾವಂತ ಮಕ್ಕಳು ರೈತರ ಮನೆಯಲ್ಲಿಯೂ ಸಹ ಹುಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು 15 ದಿವಸದ ಹಿಂದೆ ಒಬ್ಬ ಗೌಡನ ಮನೆಗೆ ಹೋಗಿದ್ದೆ. ಈತನಿಗೆ ಮೂರು ವರ್ಷದ ಒಂದು ಮೊಮ್ಮಗ ಇದ್ದ. ಕಾಫಿ ಕುಡಿದುಕೊಂಡು ಹೋಗಬೇಕೆಂದು ಅವರು ಹೇಳಿದರು. ಹಾಗಾಗಿ ನಾನು ಅಲ್ಲಿಯೇ ಕುಳಿತುಕೊಂಡೆ. ಈ ಸಂದರ್ಭದಲ್ಲಿ ಆ ಮಗು ನನ್ನ ಹತ್ತಿರ ಬಂತು. ಈ ಮಗು ಹತ್ತಿರ ನೀವು ಏನು ಬೇಕಾದರೂ ಕೇಳಿ ಎಂದು ಗೌಡರು ಹೇಳಿದರು. ಈ ಮಗು ಶಾಲೆಗೆ ಹೋಗುತ್ತಿದೆಯೇ ಎಂದು ನಾನು ಹೇಳಿದೆ. ಅದೆಲ್ಲಾ ಬೇಡ, ನೀವು ಏನು ಬೇಕಾದರೂ ಹೇಳಿ ಎಂದು ಅವರು ಹೇಳಿದರು. ಈ ದೇಶದ ಪ್ರಧಾನ ಮಂತ್ರಿ ಯಾರೆಂದು ನಾನು ಕೇಳಿದೆ. ವಾಜಪೇಯಿ ಎಂದು ಉತ್ತರ ಕೊಟ್ಟ. ಹಾಗೆಯೇ ನಮ್ಮ ರಾಜ್ಯದ ಮುಖ್ಯಮಂತ್ರಿ ಯಾರೆಂದು ಕೇಳಿದ್ದಕ್ಕೆ ಎಸ್.ಎಂ. ಕೃಷ್ಣ ಎಂದು ಉತ್ತರ ಕೊಟ್ಟ ಮತ್ತು ಶಿಕ್ಷಣ ಸಚಿವರು ಯಾರೆಂದು ಕೇಳಿದ್ದಕ್ಕೆ ವಿಶ್ವನಾಥ್ ಎಂದು ಉತ್ತರ ಕೊಟ್ಟ. ರಷ್ಯ ಮತ್ತು ಅಮೇರಿಕಾದ ಪ್ರಧಾನ ಮಂತ್ರಿ ಯಾರೆಂದು ಹೀಗೆ ಸುಮಾರು 100 ಪ್ರಶ್ನೆಗಳನ್ನು ಕೇಳಿದೆ. ಎಲ್ಲದಕ್ಕೂ ಸಹ ಆ ಮಗು ಉತ್ತರ ಕೊಟ್ಟಿತು. ಪ್ರತಿಭೆಗೆ ಸರಿಯಾದ ಅವಕಾಶ ಸಿಗದೇ ಇದ್ದರೆ ಯಾವರೀತಿ ಒಂದೇ ಕಡೆ ಇರುತ್ತದೆ ಎಂಬ ಬಗ್ಗೆ ನಾನು ಈ ಉದಾಹರಣೆಯನ್ನು ಕೊಟ್ಟಿದ್ದೇನೆ. ಹಳ್ಳಿಯ ಗೌಡನಿಂದ ಇಂಥ ಪ್ರತಿಭಾವಂತ ಮಗುವನ್ನು ಓದಿಸುವುದಕ್ಕೂ ಸಹ ಶಕ್ತಿ ಇಲ್ಲದಂಥ ಪರಿಸ್ಥಿತಿ ಬಂದಿದೆ. ಇಂಥ ಪ್ರತಿಭಾವಂತ ಮಕ್ಕಳಿಗೆ ಸರಿಯಾದಂಥ

ಸೌಲಭ್ಯ ಒದಗಿಸಿಕೊಟ್ಟರೆ ಅವರೂ ಸಹ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ನಾನು ಈಗಾಗಲೇ ಹೇಳಿದಂತೆ ತಾವು ಯಾವಾಗಲೂ ಸಂವಿಧಾನದಲ್ಲಿರುವ ಸಮಾನತೆ ಬಗ್ಗೆ ಹೇಳುತ್ತೀರಿ. ಈ ಸಂವಿಧಾನ ಬರೆಯುವುದಕ್ಕೆ ಯಾರಾದರೂ ರೈತನ ಮಗ ಏನಾದರೂ ಹೋಗಿದ್ದಾನೆಯೇ? ಅಷ್ಟೊಂದು ಪುಟಗಳಿರತಕ್ಕಂಥ ಸಂವಿಧಾನದಲ್ಲಿ, ಹಳ್ಳಿಯ ರೈತನ ಕ್ಷೇಮಾಭಿವೃದ್ಧಿಗೆ ಸಂಬಂಧಪಟ್ಟಂತೆ ಒಂದು ಪದವೂ ಇಲ್ಲ. ನಿಮಗೆ ಬೇಕಾದವರಿಗೋಸ್ಕರ ಸಂವಿಧಾನವನ್ನು ಬರೆದುಕೊಂಡಿದ್ದೀರಿ. ಇದನ್ನು ರೈತನ ತಲೆಯ ಮೇಲೆ ಹೇರುತ್ತಿದ್ದಾರೆ. ಇದೇ ಪರಿಸ್ಥಿತಿ ಇನ್ನೂ 10 ವರ್ಷಗಳ ಕಾಲ ಮುಂದುವರೆದರೆ, ಆ ಸಂವಿಧಾನವನ್ನು ಹರಿದು ಬೆಂಕಿ ಹಚ್ಚತಕ್ಕಂಥ ಕಾಲ ಬಂದೇ ಬರುತ್ತದೆ. ಇವತ್ತಿನ ದಿವಸ ಪಟ್ಟಣದಲ್ಲಿ ಕಾನ್ವೆಂಟ್‌ನಲ್ಲಿ ಓದತಕ್ಕಂಥ ಮಕ್ಕಳಿಗೆ ಯಾವ ರೀತಿಯಾದ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತಿದೆಯೋ, ಅದೇ ಸೌಲಭ್ಯವನ್ನು ಹಳ್ಳಿಯ ಮಕ್ಕಳಿಗೆ ಒದಗಿಸಿಕೊಡಬೇಕಾಗುತ್ತದೆ. ಈ ನಂತರ ಈತನನ್ನು ಪರಿಶೀಲನೆ ಮಾಡಿ ಮತ್ತು ಹಳ್ಳಿಯ ಮಕ್ಕಳನ್ನು ಪರಿಶೀಲನೆ ಮಾಡಿ. ತಾವು ಸಮಾನತೆ ಎಂದು ಹೇಳಿಕೊಂಡು ಇಷ್ಟೊಂದು ವ್ಯತ್ಯಾಸ ಮಾಡುತ್ತಾ ಹಳ್ಳಿಯ ಮಕ್ಕಳಿಗೆ ಅನ್ಯಾಯ ಮಾಡುವುದು ಒಳ್ಳೆಯದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಳ್ಳಿ ಮಕ್ಕಳಿಗೆ ಸರಿಯಾದಂಥ ವಾತಾವರಣ ಕೊಟ್ಟು ವಿದ್ಯಾಭ್ಯಾಸ ಕೊಟ್ಟರೆ ಯಾವ ವಿಧದಲ್ಲಿಯೂ ಕೂಡ ಪಟ್ಟಣಗಳಲ್ಲಿರತಕ್ಕಂಥ ಅನುಕೂಲಸ್ಥರ ಮಕ್ಕಳಿಗಿಂತ ಈ ಮಕ್ಕಳು ಕಡಿಮೆ ಆಗಿರುವುದಿಲ್ಲ. ನಾನು 10 ದಿವಸಗಳ ಹಿಂದೆ ಒಂದು ಹೈಸ್ಕೂಲ್‌ಗೆ ಹೋಗಿದ್ದೆ. ಇವರು ಸುಧಾರಣೆ ಮಾಡುತ್ತೇವೆಂದು 5ನೇ ತರಗತಿಯನ್ನು 6ನೇ ತರಗತಿಗೆ ಸೇರಿಸಿ ಹಳ್ಳಿಯ ವಿದ್ಯಾಭ್ಯಾಸದ ಮಟ್ಟವನ್ನು ಹಾಳು ಮಾಡುತ್ತಿದ್ದಾರೆ. ಈ ದೇಶದ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಂಡು ಮತ್ತು ದೇಶದ ಇತಿಹಾಸ, ಧಾರ್ಮಿಕ ವಿಷಯಗಳನ್ನೊಳಗೊಂಡ ಜೀವನ ಮೌಲ್ಯದ ವಿದ್ಯಾಭ್ಯಾಸವನ್ನು ಹಳ್ಳಿಯ ಮಕ್ಕಳಿಗೆ ಕೊಡುತ್ತಿಲ್ಲ. ಇವತ್ತಿನದಿವಸ ಓದುವುದು ಮತ್ತು ಬರೆಯುವುದು ಒಂದು ವಿದ್ಯಾಭ್ಯಾಸವೇ? ಹೈಸ್ಕೂಲಿನ ಒಬ್ಬ ಹುಡುಗನಿಗೆ ಮೂರರ ಮಗ್ಗಿಯನ್ನು ಹೇಳು ಎಂದು ನಾನು ಕೇಳಿದೆ. ಆತ ಪ್ರಾರಂಭ ಮಾಡಿ ೩x೧=೩, ೩x೨=೬ ಮತ್ತು ೩x೩= ೯೫ ಎಂದು ಹೇಳಿದ. ಈತ ಹೀಗೆಕೆ ಹೇಳುತ್ತಿದ್ದಾನೆಂದು ನಾನು ಮೇಸ್ಟರನ್ನು ಕೇಳಿದ್ದಕ್ಕೆ, ಆತ ಹಾಗೆ ಸಾರ್ ಹೇಳುವುದೆಂದು ಮೇಸ್ಟರ್ ಹೇಳುತ್ತಾರೆ. ನಿಮಗೆ ಎಷ್ಟು ಸಂಬಳ ಬರುತ್ತದೆಂದು ಕೇಳಿದ್ದಕ್ಕೆ, ಆತ ಸುಮಾರು ಒಂಬತ್ತು ಸಾವಿರ ರೂಪಾಯಿ ಬರುತ್ತದೆಂದು ಹೇಳಿದ. ಹಾಗಾದರೆ ಈ ರೀತಿ ಏಕೆ ಹೇಳಿಕೊಟ್ಟಿದ್ದೀರಿ ಒಂದು ಕೇಳಿದ್ದಕ್ಕೆ, ಇದು ಹಾಗೆಯೇ ಎಂದು ಆತ ಹೇಳಿದ. ಈ ರೀತಿಯಾದಂಥ ವಿದ್ಯಾಭ್ಯಾಸವನ್ನು ಹಳ್ಳಿಯ ಮಕ್ಕಳಿಗೆ ಕೊಡುವುದು ಸರಿಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆ ಸಂದರ್ಭದಲ್ಲಿ ನೇಮಕಾತಿ ಮಾಡುವಾಗ ನೀವು ನೇಮಕಾತಿ ಸಮಿತಿಗೆ ಸದಸ್ಯರಾಗಿದ್ದರೆಂದು ಕಾಣುತ್ತದೆ.

ಶ್ರೀ ಕೆ.ಎಚ್ ಹನುಮೇಗೌಡ :— ಆಗ ನಾನು ಇರಲಿಲ್ಲ. ಒಂದು ವೇಳೆ ನಾನು ಇದ್ದಿದ್ದರೆ ಇಂಥವರನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈಗ ಆ ಉಪಾಧ್ಯಾಯರು ಇರಬೇಕಾದರೆ, ನೀವು 1973ರಲ್ಲಿ ಶಾಸಕರಾಗಿದ್ದಂಥ ಸಂದರ್ಭದಲ್ಲಿ ಇವರನ್ನು ನೇಮಕ ಮಾಡಿಕೊಂಡಿರಬೇಕು. ಏಕೆಂದರೆ ಕೆಲಸಕ್ಕೆ ಸೇರಿ 30 ವರ್ಷ ಆಗಿದೆ ಎಂದು ಹೇಳಿದ್ದೀರಿ.

ಶ್ರೀ ಕೆ.ಎಚ್ ಹನುಮೇಗೌಡ :— ಆತ ರಾಯಚೂರು ಅಥವಾ ಗುಲ್ಬರ್ಗಕ್ಕೆ ಸೇರಿದವನು ಇರಬಹುದು ನನಗೆ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮ ಕಡೆಯವರಿಗೆ ನಿಮ್ಮಲ್ಲಿ ನೌಕರಿಯೇ ಸಿಗುವುದಿಲ್ಲ.

ಶ್ರೀ ಕೆ.ಎಚ್ ಹನುಮೇಗೌಡ :— ಈ ದೇಶದಲ್ಲಿರುವ ಎಲ್ಲಾ ರೈತರು ಒಂದೇ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರಿಗೂ ಅವಕಾಶವನ್ನು ಕೊಟ್ಟರೆ, ಪ್ರತಿಭಭಾವಂತರು ಇರುತ್ತಾರೆ ಅವರು ಬೆಳೆಯುತ್ತಾರೆ ಎನ್ನುವ ಮಾತನ್ನು ನಾನು ಹೇಳಿದೆ. ನೀವು ಒಂದು ಒಳ್ಳೆಯ ಕೆಲಸವನ್ನು ಮಾಡಿರುತ್ತೀರಿ. ಒಳ್ಳೆಯದನ್ನು ಒಳ್ಳೆಯದು ಎಂದು ಹೇಳಬೇಕಾಗುತ್ತದೆ, ದಯಮಾಡಿ ನೀವು ಬೇಜಾರು ಮಾಡಿಕೊಳ್ಳಬೇಡಿ. ಗ್ರಾಮೀಣ ಮಕ್ಕಳಿಗೆ ನೇಮಕಾತಿಯಲ್ಲಿ 25 ಪರ್ಸೆಂಟ್, ಮಾಡಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಬ್ಬ ಮನುಷ್ಯನ ಪರ್ಸ ನ್ಯಾಲಿಟಿ ಎಂದರೆ ಏನು? ಒಬ್ಬ ಮನುಷ್ಯನು ಒಳ್ಳೆಯ ಗುಣಗಳನ್ನು ಅರಿತುಕೊಂಡು ನ್ಯಾಯನೀತಿ ಧರ್ಮದಲ್ಲಿ ಉತ್ತಮವಾಗಿದ್ದು ಕನಿಷ್ಟ ಒಳ್ಳೆಯ ಗುಣಗಳನ್ನು ಸೇರಿಸಿಕೊಂಡ ಮೇಲೆ ಅವನು ಒಳ್ಳೆಯವನೆಂದು ಹೇಳಬಹುದು. ಇಂಗ್ಲೀಷ್ ನಲ್ಲಿ ಮಾತನಾಡುವುದು ಒಂದು ಒಳ್ಳೆಯ ಪರ್ಸ್‌ನ್ಯಾಲಿಟಿಯೇ? ಹಳ್ಳಿಯಿಂದ ಬಡವರ ಮನೆಯಿಂದ ಬಂದಿರತಕ್ಕಂಥ ವಿದ್ಯಾರ್ಥಿಗೆ, ಆ ಗೋಳು, ಆ ನೋವು, ಆ ಕಷ್ಟ, ಆ ಪರಿಸರ ಎಲ್ಲವು ಗೊತ್ತಿರುತ್ತದೆ. ಲಂಡನ್‌ನಲ್ಲಿ ಓದಿರುವವರನ್ನು ಇಲ್ಲಿ ತಂದು ದೊಡ್ಡ ದೊಡ್ಡ ಆಫೀಸರ್‌ಗಳನ್ನು ಮಾಡಿ ಇಲ್ಲಿ ಕೂಡಿಸಿದರೆ, ಹಳ್ಳಿಯವರ ಕಷ್ಟ ಸುಖ ಅವರಿಗೆ ಗೊತ್ತಿರುತ್ತದೆಯೇ? ನಾನು ಅವರಿಗೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಹಳ್ಳಿಯ ಮಕ್ಕಳಿಗೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ, ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಟ್ಟು, ಅವರು ಕೂಡ ಜೀವನದಲ್ಲಿ ಮೇಲೆ ಬಂದು, ಇದು ನಮ್ಮ ದೇಶ, ಇದು ನಮ್ಮ ಸಮಾಜ ಎನ್ನುವ ಭಾವನೆಯನ್ನು ನಿರ್ಮಾಣ ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಪ್ರತಿವರ್ಷ ಸುಮಾರು ನೂರಾರು ಕಾಲೇಜುಗಳನ್ನು ಮಾಡುತ್ತಿದ್ದೀರಿ. ವಿದ್ಯಾಭ್ಯಾಸ ಮಾಡಿದವರಿಗೆ ನೀವು ಎಷ್ಟು ಜನರಿಗೆ ಕೆಲಸವನ್ನು ಕೊಡುತ್ತೀರಿ. ಬಿಎ, ಬಿಎಸ್‌ಸಿ ಯಾವುದೋ ಕಾಲದಲ್ಲಿ ಗುಮಾಸ್ತರಿಗೆ ವಿದ್ಯಾಭ್ಯಾಸ

ಬೇಕಾಗಿತ್ತು ಅದನ್ನು ಕೊಟ್ಟಿರುತ್ತೀರಿ. ಈಗ ಅದರ ಅವಶ್ಯಕತೆ ಇರುವುದಿಲ್ಲ. ರೈತರಿಗೆ ಉಪಯೋಗಕ್ಕೆ ಬರತಕ್ಕಂಥ ಕೃಷಿ ಕಾಲೇಜು, ಟೆಕ್ನಿಕಲ್ ಕಾಲೇಜು ಇಂತಹವುಗಳನ್ನು ನೀವು ಹೆಚ್ಚು ಮಾಡಿದರೆ, ಪ್ರತಿಭಾವಂತ ಮಕ್ಕಳಿಗೆ ಅನುಕೂಲವಾಗುತ್ತದೆ. ಕಂಪ್ಯೂಟರ್ ವಿದ್ಯಾಭ್ಯಾಸ ಮಾಡಿದವರು ಬೇರೆ ದೇಶಕ್ಕೆ ಹೋಗಿ ಜೀವನವನ್ನು ಮಾಡುತ್ತಾರೆ. ಕೃಷಿ ಕಾಲೇಜುಗಳಿಗೆ ಆದ್ಯತೆ ಕೊಡಬೇಕು, ಬಿಎ, ಬಿಎಸ್‌ಸಿ, ಎಂಎ, ಎಂಎಸ್ಸಿ ಕಾಲೇಜುಗಳಿಗೆ ಅನುಮತಿಯನ್ನು ಕೊಡುವುದನ್ನು ಕಡಿಮೆ ಮಾಡಬೇಕು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಛೇರ್ಮನ್‌ರೇ, ಪುತ್ತೂರು ತಾಲ್ಲೂಕಿನ ಕೊಯಿಲಾ ಕ್ಯಾಟಲ್ ಫಾರ್ಮ್‌ಗೆ ಮಾನ್ಯ ಪಶುಸಂಗೋಪನಾ ಸಚಿವರು ಭೇಟಿಯನ್ನು ಕೊಟ್ಟಿದ್ದರು. ಸಾವಿರಾರು ಎಕರೆಯಿಂದ ಕೂಡಿದ ಸುವ್ಯವಸ್ಥೆಯ ಜಮೀನು ಇದೆ, ಕಳೆದ ಹಲವಾರು ವ್ಷಗಳಿಂದ ಯಾವುದೇ ವಿಧರಾದ ವಿನಿಯೋಗವಿಲ್ಲದ ಪರಿಸ್ಥಿತಿಯನ್ನು ತಾವು ಕಣ್ಣಾರೆ ಕಂಡಿರುತ್ತೀರಿ. ಮಾನ್ಯ ಹನುಮಮೇಗೌಡರು ಹೇಳಿದ ಹಾಗೆ, ಅಲ್ಲಿ ಒಂದು ಆ ವ್ಯವಸ್ಥೆಯನ್ನು ಮಾಡಬಹುದು, ಆ ಭಾಗದಲ್ಲಿ ಕೃಷಿಗೆ ಸಂಬಂಧಪಟ್ಟ ಒಂದು ಕಾಲೇಜನ್ನು ಮಾಡಬೇಕು. ಅಥವಾ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟ ಯಾವುದಾದರೂ ಒಂದು ಕಾಲೇಜನ್ನು ಮಾಡುವುದು ಸೂಕ್ತ. ಅಲ್ಲಿರುವ ಎಲ್ಲಾ ವ್ಯವಸ್ಥೆಯ ಬಗ್ಗೆ ತಮ್ಮ ಗಮನಕ್ಕೆ ತರುವ ಪ್ರಯತ್ನವನ್ನು ತಾವು ಅಲ್ಲಿಗೆ ಬಂದಾಗ ನಾವು ಮಾಡಿರುತ್ತೇವೆ. ಆ ಭಾಗದಲ್ಲಿರುವ ರೈತಾಪಿ ಜನರ ಮಕ್ಕಳಿಗೆ ಒಂದು ಒಳ್ಳೆಯ ವ್ಯವಸ್ಥೆಯಾದರೂ ಆಗಬಹುದು, ಅಲ್ಲಿ ಬೇರೆಯಾವ ಕೆಲಸಗಳೂ ನಡೆಯುತ್ತಿಲ್ಲ. ಅಲ್ಲಿ ಹೆಸರಿಗೆ ಮಾತ್ರ ಹಸು ಹಾಗೂ ಹಂದಿಗಳ ಸಾಕಾಣಿಕೆ ಇದೆ, ಇದನ್ನು ಬಿಟ್ಟರೆ ಅಲ್ಲಿ ಬೇರೆ ಯಾವ ವ್ಯವಸ್ಥೆ ಇಲ್ಲ. ಆ ಭಾಗದಲ್ಲಿ ಒಂದು ಕಾಲೇಜು ಮಾಡಿದರೆ ಆ ಭಾಗದ ರೈತರ ಮಕ್ಕಳಿಗೆ ಖಂಡಿತವಾಗಿ ಅನುಕೂಲವಾಗುತ್ತದೆ.

ಶ್ರೀ ಕೆ.ಹೆಚ್ ಹನುಮೇಗೌಡ :— ಮಾನ್ಯ ಛೇರ್ಮನ್‌ರೆ, ಈ ಭೂಮಿಯ ಕಣಕಣದಲ್ಲಿಯೂ ಆ ನಿರ್ಭಾಗ್ಯ ರೈತನ ಬೆವರು ಇರುತ್ತದೆ. ದೊಡ್ಡ ಬಿಲ್ಡಿಂಗ್ ಕಟ್ಟಲು ಇಂಜನೀಯರ್ ಪ್ಲಾನ್ ಹಾಕಿರಬಹುದು, ಅದಕ್ಕೆ ಮಣ್ಣು ಹೊತ್ತಿರುವವರು ಯಾರು? ಪಾಯ ತೆಗೆದು ಮೇಲಕ್ಕೆ ಕಲ್ಲು ಮಣ್ಣು ಹೊತ್ತುಕೊಂಡು ಹೋದವನು ಯಾರು? ಪ್ರತಿಯೊಂದರಲ್ಲಿಕೂಡ ಅಸಹಾಯಕ ಜನರ ಬೆವರು ಇದೆ. ಈ ಸಮಾಜ ಅವರನ್ನು ಗುರುತಿಸಿದ್ದಾರೆಯೇ? ಗುರುತಿಸಿ ಅದಕ್ಕೆ ಏನು ಮಾಡಬೇಕಾಗಿತ್ತು ಅದನ್ನು ಮಾಡಿಲ್ಲವೆನ್ನುವ ಮಾತನ್ನು ನಾನು ಹೇಳುತ್ತೇನೆ. ಈ ದೇಶದಲ್ಲಿ ಮನುಷ್ಯ, ಹಕ್ಕಿಪಕ್ಷಿ ಎಲ್ಲರೂ ಬೆಳೆಯಬೇಕು, ದನಕರುಗಳು ಬೆಳೆಯಬೇಕು ಕ್ರಿಮಿಕೀಟಗಳಿಗೂ ಆಹಾರವನ್ನು ಕೊಡತಕ್ಕವನು ರೈತ. ಅಂತಹ ರೈತನ ಮಕ್ಕಳಿಗೆ ನೀವು ಏನು ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ದಯಮಾಡಿ ಆಲೋಚನೆ ಮಾಡಿ. ಮಾನ್ಯ ಖರ್ಗೆಯವರೆ, ಇದು ಹೀಗೆಯೇ

ಮುಂದುವರೆಯುತ್ತದೆ, ರೈತರ ಮಕ್ಕಳು ಸುಮ್ಮನೆ ಇರುತ್ತಾರೆಂದು ನೀವು ತಿಳಿದುಕೊಳ್ಳಬೇಡಿ, ಅವರು ಎಚ್ಚೆತ್ತು ಕೈಗೆ ತೆಗೆದುಕೊಳ್ಳುವುದರೊಳಗೆ ನೀವು ಸ್ವಲ್ಪ ಬದಲಾವಣೆಯನ್ನು ಮಾಡಿ ಅವರೂ ಕೂಡ ನೆಮ್ಮದಿಯಿಂದ ಬಾಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿ, ಕೃತಾರ್ಥರಾಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಾಸನದಲ್ಲಿ ಒಂದು ಕೃಷಿ ಕಾಲೇಜು ಮಂಜೂರಾಗಿದೆ. ಮಾನ್ಯ ಖರ್ಗೆಯವರೆ, ನೀವು ಕಷ್ಟದಲ್ಲಿ ಬಂದವರು, ನೀವು ಮಾಡುತ್ತೀರಿ ಎನ್ನುವ ವಿಶ್ವಾಸದಿಂದ, ಒತ್ತಿಒತ್ತಿ ಹೇಳುತ್ತಿದ್ದೇನೆ. ಆ ಕಾಲೇಜು ಎಲ್ಲಿ ಇದೆ ಎಂದರೆ, ಅದು ಬೆಂಗಳೂರಿನಲ್ಲಿಯೇ ಇದೆ. ಹಾಸನದ ಕೃಷಿ ಕಾಲೇಜು ಹೆಬ್ಬಾಳದಲ್ಲಿ ನಡೆಯುತ್ತಿದೆ. ಹಾಸನಕ್ಕೆ ಅಧಿಕಾರಿಗಳು ಹೋಗುವುದಕ್ಕೆ ಇಚ್ಛಿಪಡುತ್ತಿಲ್ಲವೋ ಅಥವಾ ಇನ್ನು ಏನು ತೊಂದರೆ ಇದೆ. ಮಂಜೂರು ಮಾಡಿ ಶಹಭಾಷ್ ಗಿರಿಯನ್ನು ತೆಗೆದುಕೊಂಡರೆ ಆಯಿತೇ ಅಲ್ಲಿಏನೂ ವ್ಯವಸ್ಥೆ ಇಲ್ಲ. ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಮಡ್ಡಿಸೂರು ಎನ್ನುವಲ್ಲಿ 260 ಎಕರೆ ಜಮೀನು ಇದೆ, ಮುಖ್ಯ ರಸ್ತೆಯಲ್ಲಿರುತ್ತದೆ, ಮಲೆನಾಡು ಅಭಿವೃದ್ಧಿಯಾದ ಪ್ರದೇಶದಲ್ಲಿರುತ್ತದೆ. ಮಲೆನಾಡಿನ ಪೈರುಗಳನ್ನು ಹಾಗೂ ಮೆದಾನ ಪ್ರದೇಶದ ಬೆಳೆಗಳನ್ನು ರೀಸರ್ಚ್ ಮಾಡಬಹುದು, ಎಕ್ಸ್‌ಪರ್ಟ್ ಕಮೀಟಿಯವರೂ ಕೂಡ ಬಂದು ನೋಡಿಕೊಂಡು ಹೋಗಿದ್ದಾರೆ. ಮಾನ್ಯ ಕಂದಾಯ ಸಚಿವರು ಒಪ್ಪಿಕೊಂಡಿದ್ದಾರೆ, ಅವರಿಗೆ ನಾವು ಒತ್ತಾಯವನ್ನು ಮಾಡಿ ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಹಾಸನಕ್ಕೆ ಕೃಷಿ ಕಾಲೇಜು ಮಂಜೂರು ಮಾಡಿಸಿಕೊಂಡು ಬೆಂಗಳೂರಿನಲ್ಲಿಯೇ ಇಟ್ಟಿದ್ದೀರಿ, ಇನ್ನೊಂದು ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಮಾಡಿಕೊಂಡಿದ್ದೀರಿ, ಅಲ್ಲಿ ಬಿಲ್ಡಿಂಗ್ ಚೆನ್ನಾಗಿ ಇದೆ. ಅಲ್ಲಿ ಹುಡುಗರು ಇದ್ದಾರೆಯೇ?

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಛೇರ್ಮನರೆ, ಅಲ್ಲಿ ಕುಳಿತುಕೊಳ್ಳಲು ಜಾಗವಿಲ್ಲದಷ್ಟು ವಿದ್ಯಾರ್ಥಿಗಳಿದ್ದಾರೆ. ಮಾನ್ಯ ಕಂದಾಯ ಸಚಿವರು ಒತ್ತಾಯ ಮಾಡಿ ಅಲ್ಲಿ ಕೃಷಿ ಕಾಲೇಜನ್ನು ಕೊಡಿಸಿದರೆ ಅಲ್ಲಿರುವ ಜನತೆಯ ಪರವಾಗಿ ನಾವು ಇವರಿಗೆ ಒಂದು ಕೋಟಿ ಅಭಿನಂದನೆಗಳನ್ನು ಹೇಳುತ್ತೇನೆ. ರೈತರು ಬೆಳೆಯುವ ಬೆಳೆಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಎಲ್ಲಾ ಉಪ ಕಸುಬುಗಳ ಟ್ರೈನಿಂಗ್ ಅಲ್ಲಿ ಆಗುವುದರಿಂದ, ಅನುಕೂಲವಾಗುತ್ತದೆ. ಎಂಎ ಪಾಸು ಮಾಡಿಕೊಂಡವನು ಗುಮಾಸ್ತಗಿರಿ ಕೊಡಿ ಎಂದು ಕೇಳುವುದಕ್ಕೆ ಬರುವುದಿಲ್ಲ. ಬಿಎಸ್ಸಿ ಅಗ್ರಿ ಮಾಡಿಕೊಂಡರೆ ಅವನ್ನು ತನ್ನ ಜಮೀನಿನಲ್ಲಿ ಒಂದು ವೃತ್ತಿಯನ್ನು ಮಾಡಿಕೊಳ್ಳುತ್ತಾನೆ. ಈ ರೀತಿ ಜಾಬ್ ಓರಿಯೆಂಟೆಡ್ ವಿದ್ಯಾಭ್ಯಾಸವನ್ನು ನೀವು ಕೊಡುವುದಕ್ಕೆ ಏಕೆ ಹಿಂದುಮುಂದು ನೋಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದಕ್ಕಾಗಿಯೇ ನಿಮಗೆ ಅಗ್ರೀ ಕಾಲೇಜನ್ನು ಕೊಟ್ಟಿರುವುದು. ಆದರೆ ಅವರೆಲ್ಲಾ ಏನು ಹೇಳುತ್ತಾರೆ ಗೊತ್ತೇ? 1972ರಲ್ಲಿ ಮಾನ್ಯ ಹನುಮೇಗೌಡರು ಬೋರ್ಡ್ ಆಫ್ ರಿಲಿಜೆಂಟ್ಸ್ ಆಗಿದ್ದರು, ಆಗ ನಾವು ನೇಮಕಾತಿ ಹೊಂದಿರುವರು. ಹನುಮೇಗೌಡರು ಹೇಳುವವರೆಗೆ ನಾವು ಅಲ್ಲಿಗೆ ಹೋಗುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಆಗ ಇವರೂ ಕೂಡ ನನ್ನ ಜೊತೆಯಲ್ಲಿಯೇ ಇದ್ದರು, ಆಗ ಅವರು ನಾವು ಇಬ್ಬರೂ ಕೂಡಿಕೊಂಡು ಬಹಳ ಒಳ್ಳೆಯ ಕೆಲಸವನ್ನು ಮಾಡಿರುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ :— ನೀವು ಇಬ್ಬರೂ ಮಾತನಾಡಿಕೊಂಡು, ನೇಮಕಾತಿಯಾಗುವವರಿಗೆ ಆ ರೀತಿ ಹೇಳಿಯೇ ಮಾಡಿಕೊಂಡಿದ್ದೀರಾ?

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಹನುಮೇಗೌಡರು ಹೇಳಿದರು, ಬಿಎಸ್ಸಿ ಅಗ್ರಿ ಮುಗಿಸಿದ ಮೇಲೆ, ಅವರು ಹೋಗಿ ಜಮೀನಿನಲ್ಲಿ ಕೆಲಸ ಮಾಡುತ್ತಾರೆಂದು, ಎಸ್ಎಸ್ಎಲ್ಸಿ ಪಾಸು ಅಥವಾ ಫೇಲಾದವರೇ ಹೋಗಿ ಹೋದಲ್ಲಿ ಕೆಲಸ ಮಾಡುವುದಿಲ್ಲ. ಅವರು ಕಟ್ಟೆ ಮೇಲೆ ಕುಳಿತುಕೊಂಡು ಬೌಕಾಬಾರ ಆಡುತ್ತಾರೆ, ಬಿಎಸ್ಸಿ, ಎಂಎಸ್ಸಿ ಅಗ್ರಿ ಮಾಡಿಕೊಂಡವರು ಹೋಗಿ ಜಮೀನಿನಲ್ಲಿ ಕೆಲಸ ಮಾಡುವ ಕಾಲ ಇದು ಅಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :— ಎಸ್ಎಸ್ಎಲ್ಸಿಯವರಿಗೆ ಹೇಳಿರುವ ವಿದ್ಯಾಭ್ಯಾಸ ಯಾವುದು? ಬಿಎಸ್ಸಿ ಅಗ್ರಿ ಓದಿದವನ ವಿದ್ಯಾಭ್ಯಾಸ ಯಾವುದು, ಅವನ ಹಾಗೂ ಇವನ ತಿಳುವಳಿಕೆ ಏನು? ತಂದೆ ಮಾಡತಕ್ಕಂಥ ವೃತ್ತಿಯಲ್ಲಿ ಅವನು ವಿದ್ಯಾಭ್ಯಾಸ ಮಾಡಿದರೆ ಹತ್ತು ಜನರಲ್ಲಿ ಒಬ್ಬರಾದರೂ ಹೋಗುತ್ತಾರೆ. ನಮ್ಮ ಕುಲಕಸುಬಿನಲ್ಲಿ ತರಬೇತಿ ಕೊಟ್ಟರೆ ನಾವು ಹಳ್ಳಿಯಲ್ಲಿ ಹೋಗಿ ಸೆಟ್ಲ್ ಆಗುತ್ತೇವೆಂದು ಅವರು ಹೇಳುತ್ತಾರೆ. ಎಸ್ಎಸ್ಎಲ್ಸಿ

5.50 ಪಿ.ಎಂ.

ಮಾಡಿಕೊಂಡಿರುವಮನು ಅಲ್ಲಿಗೆ ಏತಕ್ಕೆ ಹೋಗುತ್ತಾನೆ, ಟೌನ್‌ನಲ್ಲೇ ಎಲ್ಲವನ್ನೂ ನೋಡಿರುತ್ತಾನೆ. ದಯವಿಟ್ಟು ನಮ್ಮ ಸದಾನಂದಗೌಡರು ಹೇಳಿದ ಕಡೆ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಕಾಲೇಜನ್ನು ಅಲ್ಲಿಗೂ ಕೊಡಿ, ಹೆಚ್ಚುಹೆಚ್ಚು ಇದನ್ನು ತೆಗೆಯಿರಿ. ಬಿ.ಎ.ಬಿಎಸ್ಸಿ ಎಂ.ಎ. ಎಂಎಸ್ಸಿ, ಓದುವುದನ್ನು ನಿಲ್ಲಿಸಿ, ಸಾಕು. 15 ದಿವಸಗಳ ಹಿಂದೆ ಬೆಂಗಳೂರಿನಲ್ಲಿ ಮುಸುಕಿನ ಜೋಳದ ವಸ್ತುಪ್ರದರ್ಶನ ನಡೆಯಿತು, ಅದನ್ನು ನೋಡಿ ನನಗೂ ಕೂಡ ಬಹಳ ಸಂತೋಷವಾಯಿತು. ಅದೇ ರೀತಿ ಚೈನಾದೇಶದಲ್ಲಿ 5-10 ಎಕರೆಗಳಲ್ಲಿ ವ್ಯವಸಾಯ ಮಾಡಲು ಬಳಸತಕ್ಕಂತಹ ಸಣ್ಣ ಸಣ್ಣ ಟ್ರಾಕ್ಟರ್‌ಗಳು, ಸಣ್ಣ ಸಣ್ಣ ಉಪಕರಣಗಳನ್ನು

ಬಳಸುತ್ತಿದ್ದಾರೆ. ಇಲ್ಲಿ 35-40 ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕಂಥವನು ಮಾತ್ರ ಟ್ರಾಕ್ಟರ್‌ನ್ನು ಇಟ್ಟುಕೊಳ್ಳುವುದಕ್ಕಾಗುತ್ತದೆ, ಎಲ್ಲಾ ರೈತರು ಇಡುವುದಕ್ಕೆ ಆಗುವುದಿಲ್ಲ. ಆ ದೇಶದಲ್ಲಿ ಸಣ್ಣ ರೈತರು ಕೂಡ ಬಳಸತಕ್ಕಂತಹ ಕೃಷಿ ಉಪಕರಣಗಳನ್ನು ತಯಾರು ಮಾಡಿದ್ದಾರಂತೆ, ರೈತರು ಹೆಚ್ಚು ಕಷ್ಟಪಡತಕ್ಕಂತಹ ಪರಿಸ್ಥಿತಿಯಿಲ್ಲ, ನಿಮ್ಮ ವಿಜ್ಞಾನಿಗಳು ಏನಿದ್ದಾರಲ್ಲಾ, ಅಂತಹ ಯಂತ್ರಗಳನ್ನು ತಯಾರು ಮಾಡುವ ಚೈತನ್ಯವಿದ್ದರೆ ಮಾಡಬೇಕು. ಇಲ್ಲದಿದ್ದರೆ ಚೈನಾದೇಶದಲ್ಲಿ ಬಳಸತಕ್ಕಂತಹ ಆ ಕೃಷಿ ಉಪಕರಣಗಳ ಪ್ರದರ್ಶನವನ್ನು ಇಲ್ಲಿ ಮಾಡಿಸಿ ಕೈಗಾರಿಕೋದ್ಯಮಿಗಳನ್ನು ಕರೆಸಿ ನಿನಗೆ ಪರವಾನಗಿ ಕೊಡಬೇಕಾದರೆ ಇಂತಹ ಉಪಕರಣಗಳನ್ನು ಕಡಿಮೆ ದರದಲ್ಲಿ ತಯಾರು ಮಾಡಬೇಕೆಂದು ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಧ್ಯವಾದರೆ ಚೆನ್ನಾಗಿ ವಿಚಾರ ತಿಳಿದುಕೊಂಡಿರತಕ್ಕಂತಹ ಉತ್ತಮ ರೈತರನ್ನು ಚೈನಾ, ಇಸ್ರೇಲ್ ಇಂತಹ ದೇಶಗಳಿಗೆ ಕಳುಹಿಸಿ ಅಲ್ಲಿಂದ ವಿಚಾರವನ್ನು ತಿಳಿದುಕೊಂಡು ಆ ಮಾದರಿ ವ್ಯವಸಾಯವನ್ನು ಇಲ್ಲಿ ಮಾಡಿಸುವುದರಿಂದ ಈ ದೇಶದ ಕೃಷಿ ಅಭಿವೃದ್ಧಿ ಹೆಚ್ಚಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಒಂದು ಎಕರೆಯಲ್ಲಿ ಎಷ್ಟೇ ಆಧುನಿಕವಾಗಿ ಭತ್ತವನ್ನು ಬೆಳೆದರೂ 35-40 ಕ್ವಿಂಟಾಲ್‌ಕ್ಕಿಂತ ಹೆಚ್ಚಾಗುವುದಿಲ್ಲ. ಚೈನಾ ದೇಶದಲ್ಲಿ ಒಂದು ಎಕರೆಯಲ್ಲಿ ಆ್ಯವರೇಜ್ 125 ಕ್ವಿಂಟಾಲ್ ಭತ್ತವನ್ನು ಬೆಳೆಯುತ್ತಾರೆ. ನಮಗಿಂತ ಕಡಿಮೆ ಫಲವತ್ತತೆ ಇರುವ ದೇಶವಾಗಿದ್ದು ನಾವು 100 ಪಲ್ಲೆ ಭತ್ತವನ್ನು ಬೆಳೆದರೆ ಅವರು 250 ಪಲ್ಲೆ ಬೆಳೆಯುತ್ತಾರೆ. ಅವರು ಅಷ್ಟು ಕೃಷಿಯಲ್ಲಿ ಮುಂದುವರಿದಿದ್ದಾರೆ. ಅಲ್ಲಿಯ ಉಪಕರಣಗಳನ್ನು ತರಿಸಿಕೊಡಿ. ಸಾಧ್ಯವಾಗದಿದ್ದರೆ ಇಲ್ಲಿಯೇ ಅವನ್ನು ತಯಾರು ಮಾಡಿ ಹಳ್ಳಿಯ ರೈತರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರಾಜ್ಯದಲ್ಲಿ ಮಾಡುವಂತಹ ಉತ್ತಮವಾದ ಕೆಲಸವೆಂದರೆ, ಡೈರಿ. ಎಲ್ಲಾ ಯೋಜನೆಗಳಿಗಿಂತ ಉತ್ತಮವಾದ ಯೋಜನೆಯೆಂದರೆ ಈ ಡೈರಿಯಾಗಿದೆ. ಪ್ರತಿಯೊಬ್ಬರಿಗೂ ಕೂಡ ಹನಿಹನಿಯಾಗಿ ತಲುಪತಕ್ಕಂತಹ ಯೋಜನೆಯಾಗಿದೆ, ಒಂದು ಡ್ಯಾಂ ನ್ನು ಕಟ್ಟಿದರೆ, ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡಿದರೆ, ಆ ಕುಟುಂಬದಲ್ಲಿರುವವರಿಗೆ ಮಾತ್ರ ಅನುಕೂಲವಾಗುತ್ತದೆ, ಆದರೆ ಡೈರಿಯಿಂದ ಒಬ್ಬ ವಿಧವೆ, ಅಸಹಾಯಕ ಜನ ಒಂದು ಹಸುವನ್ನು ತೆಗೆದುಕೊಂಡರೂ ಕೂಡ ಒಂದು ಸಂಸಾರದ ಜನ ಚೆನ್ನಾಗಿ ಜೀವನವನ್ನು ಮಾಡುತ್ತಾರೆ. ಹಸುವಿನಿಂದ ಹಾಲು ಬರುತ್ತದೆ, ಅದನ್ನು ವಾರಕ್ಕೆ ಸರಿಯಾಗಿ ಹಣವು ಸಿಗುತ್ತದೆ. ಅದರಿಂದ ಬರುವ ಗಂಜಲ ಹಾಗೂ ಗೊಬ್ಬರದಿಂದ ಭೂಮಿಯ ಫಲವತ್ತತೆಹೆಚ್ಚುತ್ತದೆ. ಇದರಿಂದಾಗಿ ಮಕ್ಕಳಿಗೆ ಒಳ್ಳೆಯ ಪೌಷ್ಟಿಕ ಆಹಾರವಾದ ಹಾಲು ಮತ್ತು ಬೆಣ್ಣೆ ಸಿಗುವುದರಿಂದ, ಆ ಮಗುವು ಕೂಡ ಚೆನ್ನಾಗಿ ಆರೋಗ್ಯವಾಗಿ ಬೆಳೆಯುತ್ತದೆ, ಇಷ್ಟೆಲ್ಲಾ ಅನುಕೂಲವಾಗುತ್ತದೆ. ಮಾನ್ಯ ಕೃಷ್ಣಪ್ಪನವರೇ, ಅಲ್ಲಿ ಮೆಯುವವರನ್ನು ಮೊದಲು ಹಿಡಿದು ಬಲಿ ಹಾಕಬೇಕು, ಅಷ್ಟು ಮಾಡಿದರೆ ಸಾಕು. ಇದು ಒಂದು ಒಳ್ಳೆಯ ಸ್ಕೀಂ ಆಗಿದೆ, ಪ್ರತಿ ಮನೆಮನೆಗೂ ಕೂಡ

ಆದು ಹಂಚಿಹೋಗುತ್ತದೆ, ಇದರಿಂದಾಗಿ ಎಷ್ಟೋ ಜನರಿಗೆ ನೆಮ್ಮದಿಯಾಗಿದೆ. ಈಗ ಎಲ್ಲಾ ಕಡೆಗಳಲ್ಲೂ ಬರ ಬಂದಿದೆ, ಆದರೆ ಡೈರಿ ಆಕ್ಟಿವಿಟೀಸ್ ಮಾತ್ರ ನಿಂತಿಲ್ಲ. ಜನಗಳು ಏನಾದರೂ ಜಾನುವಾರುಗಳಿಗೆ ಮೇವನ್ನು ಹಾಕಿ ಜೀವನವನ್ನು ಮಾಡಿಕೊಳ್ಳುತ್ತಾರೆ. ಇಂತಹ ಉಪಯುಕ್ತವಾದ ಯೋಜನೆಯನ್ನು ಯೋಗ್ಯರು ಮತ್ತು ಉತ್ತಮರ ಕೈಗೆ ಕೊಡಬೇಕು. ಇದು ಯಾವಾನಾದರೂ ಅಯೋಗ್ಯನ ಕೈಗೆ ಸಿಕ್ಕಿ ಅವ್ಯವಸ್ಥಿತ ಮಾಡುತ್ತಾನೆಂದು ಗೊತ್ತಾದ ಕೂಡಲೇ ನೀನು ಬೇರೆ ಕೆಲಸಕ್ಕೆ ಹೋಗು ಎಂದು ಹೊರಗೆ ಕಳುಹಿಸಬೇಕು. ನೀನು ರೈತರ ಪರವಾಗಿ ಕೆಲಸವನ್ನು ಮಾಡುವುದಕ್ಕೆ ಸರಿಯಾಗಿಲ್ಲ ಎಂದು ಈ ರೀತಿಯಾಗಿ ನೀವು ಆ ಕೆಲಸವನ್ನು ಮಾಡಬೇಕು. ಒಂದು ಮಾತನ್ನು ಹೇಳುವುದಾದರೆ, ಅಲ್ಲಿ ನಾಲ್ಕಾರು ವರ್ಷಗಳಿಂದ ಅನ್ಯಾಯವಾಗುತ್ತಿದ್ದರೂ ಕೂಡ ತಾವು ಮತ್ತು ಸಹಕಾರ ಮಂತ್ರಿಗಳಾದ ಶ್ರೀ ಶಿವಕುಮಾರ್ ರವರು ಏಕೆ ಆ ವಿಯನ್ನು ಮುಚ್ಚಿಕೊಂಡು ಆ ಕಡೆ ತಿರುಗಿಕೊಳ್ಳುತ್ತೀರಾ? ಇದು ನಿಮ್ಮ ಧರ್ಮವೇ? ಲಕ್ಷ ಲಕ್ಷ ಜನ ರೈತರು ಹಾಕುವಂತಹ ಶಾಪ ನಿಮಗೆ ತಟ್ಟುವುದಿಲ್ಲವೇ? ನೀವು ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಿ ನೋಡಬೇಕು. ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡಿದರೆ ಆ ಹಳ್ಳಿಯ ರೈತರು ಎಷ್ಟು ಸಂತೋಷವನ್ನು ಪಡುತ್ತಾರೆ, ಅವರಿಗೆ ಎಷ್ಟು ಒಳ್ಳೆಯದಾಗುತ್ತದೆ, ಈಗ ನಾನೇ ತಪ್ಪು ಮಾಡಿದರೆ, ನಿಮ್ಮ ಜೊತೆ ನಾನು ಶಾಸಕನಾಗಬಹುದು, ನನ್ನನ್ನು ಒದ್ದು ಜೈಲಿಗೆ ಹಾಕಬೇಕು, ನನ್ನಂತಹವನು ಒಬ್ಬ ಜೈಲಿಗೆ ಹೋದರೆ ನಿಮಗೇನು ತೊಂದರೆಯಾಗುತ್ತದೆಯೇ ಆಥವಾ ದೇವರು ನಿಮ್ಮನ್ನು ನರಕಕ್ಕೆ ಕರೆದುಕೊಂಡು ಹೋಗುತ್ತಾನೆಯೇ? ಇಂತಹ ಉತ್ತಮವಾದಂತಹ ಕೆಲಸಗಳನ್ನು ಮಾಡಿದರೆ ಕೋಟಿಗಟ್ಟಲೆ ಜನ ಇಂತಹ ಒಳ್ಳೆಯ ಸರ್ಕಾರದಲ್ಲಿ ಒಳ್ಳೆಯ ಮಂತ್ರಿಗಳಿದ್ದರು ಒಳ್ಳೆಯ ಅಧಿಕಾರಿಗಳಿದ್ದರು ಎಂದು ನಮಗೆ ಹೇಗಿದ್ದರೂ ಜೀವನ ನಡೆಯುತ್ತದೆ ಎಂದು ಹೇಳುತ್ತಾರೆ. ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ, ಎಲ್ಲಾ ಡೈರಿಯಲ್ಲೂ ಒಂದು ಲೀಟರ್ ಹಾಲಿಗೆ 8-00 ರೂಪಾಯಿ, 8-50 ರೂಪಾಯಿ, 8-75 ರೂಪಾಯಿ ಕೊಟ್ಟರು. ಆದರೆ ಹಾಸನ ಡೈರಿ ಯೂನಿಯನ್ ನಲ್ಲಿ ಕೊಡಗು, ಹಾಸನ, ಚಿಕ್ಕಮಗಳೂರು ರೈತನಿಗೆ 3 ವರ್ಷಗಳ ಕಾಲ 7-00 ರೂಪಾಯಿಗಳನ್ನು ಕೊಟ್ಟರು. ಆಗ ನೀವೇನು ಮಾಡುತ್ತಿದ್ದೀರಿ? ಆಗ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಸುಮಾರು ಒಂದೂವರೆ ಕೋಟಿ ರೂಪಾಯಿಗಳು ನಮ್ಮ ರೈತರಿಗೆ ಲಾಸಾಯಿತು ಮಾನ್ಯ ಕಂದಾಯ ಸಚಿವರಾದ ಶ್ರೀಕಂಠಯ್ಯನವರಿಗೆ ಹಾಲು ಮತ್ತು ಮೊಸರಿನ ಬಗ್ಗೆ ಗೊತ್ತಾಗುವುದಿಲ್ಲ. ನಿಮ್ಮ ಖಾತೆಗೆ ಸಂಬಂಧಿಸಿದಲ್ಲ ಎಂದು ಹೇಳಿದೆ, ನೀವೇಕೆ ಬೇಸರವನ್ನು ಪಟ್ಟುಕೊಳ್ಳುತ್ತೀರಿ. ಇದರಲ್ಲಿ ನಿಮ್ಮ ಜವಾಬ್ದಾರಿ ಕಡಿಮೆ, ನಾನು ಪಶುಸಂಗೋಪನಾ ಸಚಿವರಿಗೆ ಹೇಳುತ್ತಿದ್ದೇನೆ. ಇದು ರೈತರಿಗೆ ಕೋಟಿಕೋಟಿಗಟ್ಟಲೆ ಅನುಕೂಲವಾಗುವಂತಹ ಸ್ಕೀಂ ಆಗಿದೆ, ನಿಮಗೂ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :— ಮಾನ್ಯ ಛೇರ್ಮನ್‌ರವರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಇಂತಹ ವಿಚಾರಗಳಲ್ಲಿ ಯಾರ ಹತ್ತಿರವೂ ಕೂಡ ಹೊಂದಾಣಿಕೆಯನ್ನು ಮಾಡಿಕೊಂಡಿರುವುದಿಲ್ಲ. ಯಾರ ಮೂಲಾಜಿಗೆ ಒಳಪಟ್ಟು ಕೆಲಸಮಾಡತಕ್ಕಂತಹ ಪರಿಸ್ಥಿತಿಯಲ್ಲಿಲ್ಲ. ಬಹುಶಃ ಯಾರಾದರೊಬ್ಬರು ತಪ್ಪಿಸಿಕೊಂಡಿದ್ದರೆ ಕಾನೂನಿನಲ್ಲಿ ತಿದ್ದುಪಡಿಯಾದನಂತರ ತಾವು ಹೇಳಿದಂತೆ ಯಾರ್ಯಾರು ಎಲ್ಲೆಲ್ಲಿಗೆ ಕಳುಹಿಸಬೇಕೋ ಆ ಕೆಲಸವನ್ನು ಸರ್ಕಾರ ಮಾಡುತ್ತದೆ. ನಾವು ರೈತರ ಮುಲಾಜಿಗೆ ಒಲಸ ಮಾಡುತ್ತಿದ್ದೇವೆ, ಬೇರೆ ಯಾರ ಮುಲಾಜಿಗೂ ಕೆಲಸವನ್ನು ಮಾಡುತ್ತಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :— ಬಸ್ ಸ್ಟ್ಯಾಂಡ್‌ನಲ್ಲಿ ಪಿಕ್ ಪಾಕೇಟ್ ಮಾಡಿದವರಿಗೆ 15 ದಿವಸ ಇದ್ದ ಸಜಾವನ್ನು 4-6 ವರ್ಷಕ್ಕೆ ಸಜ ಮಾಡುತ್ತೀರಲ್ಲಾ, ರೈತನು ಕೊಡತಕ್ಕಂತಹ ಬಾಕಿ ಏನಾದರೂ ಇದ್ದರೆ ಅವನ ಹೆಂಡತಿಯ ಕೊರಳಿನಲ್ಲಿರುವ ತಾಳಿಯನ್ನು ಕಿತ್ತುಹಾಕುತ್ತೀರಲ್ಲಾ ಏನಾದರೂ ಸಣ್ಣ ಟಿವಿಯನ್ನು ಇಟ್ಟುಕೊಂಡಿದ್ದರೆ ಅದನ್ನೂ ಸಹ ಎತ್ತಿಕೊಂಡು ಹೋಗುತ್ತೀರಿ. ನಿಮಗೆ ಇಲ್ಲಿ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುತ್ತಿದ್ದರೆ ಅದು ನಿಮ್ಮ ಗಮನಕ್ಕೆ ಬರುತ್ತಿಲ್ಲ. ನೀವು ಅಧಿಕಾರಕ್ಕೆ ಬಂದು 2 ವರ್ಷಗಳಾಯಿತು, 4 ವರ್ಷದಿಂದ ನಿರಂತರವಾಗಿ ಈ ಲೂಟಿ ನಡೆಯುತ್ತಿದ್ದರೆ ನಿಮ್ಮ ದೃಷ್ಟಿ ಆ ಕಡೆ ಏತಕ್ಕಾಗಿ ತಿರುಗಲಿಲ್ಲಾ ಸ್ವಾಮಿ? ಒಬ್ಬ ಕಳ್ಳ ಎಂದು ಗೊತ್ತಾದರೆ, ಎಷ್ಟು ಜನ ಅಧಿಕಾರಿಗಳು ವರದಿಯನ್ನು ಕೊಡಬೇಕು? ಅಧಿಕಾರಿಗಳು ಹೇಳಿ ನೌಕರ ಸಂಘದವರು ಹೇಳಿದರೂ ಕೂಡ ಧರಣಿ ಮಾಡಿ ಏನೇನು ಮಾಡಿದರೂ ಕೂಡ ಕದಲಿಲ್ಲವಲ್ಲಾ ಏಕೇ? ಏನಾದರೂ ಆಸಕ್ತಿಯೋ ಅಥವಾ ಮತ್ತೇನು? ಇದನ್ನು ದಯವಿಟ್ಟು ಹೇಳಬೇಕು. ಕನಿಷ್ಠ ಒಬ್ಬ ಬಡವನಿಗೆ ಕೆಲಸಮಾದರೆ ಈ ಸರ್ಕಾರ ಒಳ್ಳೆಯದೆಂದು ಜನರು ಹೇಳುತ್ತಾರೆ, ಇವರು ಇನ್ನಷ್ಟು ಕಾಲ ಅಧಿಕಾರದಲ್ಲಿರಲಿ ಎಂದು ಹೇಳುತ್ತಾರೆ, ನಮ್ಮಂತಹವವಿಗೆ ಕೆಲಸವನ್ನು ಮಾಡಿಕೊಟ್ಟು ಮೆಚ್ಚುಗೆಯನ್ನು ಗಳಿಸಿಕೊಂಡರೆ ನಾವು ಎರಡು ನಿಮಿಷ ನೆನಸಿಕೊಳ್ಳುವುದಿಲ್ಲ. ಅಂತಹ ಬಡವರಿಗೆ ಸಣ್ಣ ಕೆಲಸವನ್ನು ಮಾಡಿಕೊಟ್ಟರೂ ಕೂಡ ನಮ್ಮ ಸಾಹೇಬರು ಕೆಲಸವನ್ನು ಮಾಡಿಕೊಟ್ಟರು, ಅದರಿಂದ ಜೀವನ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಇದು ಒಳ್ಳೆಯ ಇಲಾಖೆಯಾಗಿದೆ.ಇಡೀ ರಾಷ್ಟ್ರದಲ್ಲಿ ಹರಡಿರತಕ್ಕಂತಹ ಯೋಜನೆ, ಇದು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ನೋಡಬೇಕು. ಅಯೋಗ್ಯರಿಗೆ ಮೂರ್ಖರಿಗೆ ಕೊಳ್ಳೆ ಹೊಡೆಯುವವರಿಗೆ ದಯವಿಟ್ಟು ನೀವು ಅವಕಾಶವನ್ನು ಮಾಡಿಕೊಡಬೇಡಿ. ನಿಮ್ಮ ಗಮನಕ್ಕೆ ಬಂದಿರತಕ್ಕಂತಹ ಅನ್ಯಾಯಗಳ ಬಗ್ಗೆ ನೀವು ಎಷ್ಟು ದಿವಸಗಳಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಹೇಳಿ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇಂತಹ ಅನ್ಯಾಯಗಳಾಗಿರುವುದು ನಿಜವೆಂದು ರಿಪೋರ್ಟ್ ಕೊಟ್ಟು ಎರಡು ತಿಂಗಳಾಗಿದೆ. ಏತಕ್ಕೆ ಸ್ವಾಮಿ, ನೀವು ಕೈಕಟ್ಟಿ ಕುಳಿತುಕೊಂಡಿದ್ದೀರಿ?

ಶ್ರೀ ಎ. ಕೃಷ್ಣಪ್ಪ :— ನಿಮ್ಮ ಪ್ರಶ್ನೆಗಳ ಸುರಿಮಳೆ ನೇರವಾಗಿ ನನ್ನ ಖಾತೆಗೆ ಸಂಬಂಧಿಸುವುದಿಲ್ಲ. ಈ ಬಗ್ಗೆ ಸಹಕಾರ ಮಂತ್ರಿಗಳು ಉತ್ತರವನ್ನು ಕೊಡಬೇಕು, ನಾಳೆ ಕೊಡಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಒಂದು ತೆಂಗಿನ ಸಸಿಯನ್ನು ಮಗು ಸಾಕಿದಂತೆ ಹಳ್ಳಿಯ ಕಡೆ ಸಾಕುತ್ತಾರೆ. ತೆಂಗಿನಮರವನ್ನು ಆರೇಳು ವರ್ಷ ಸಾಕಿದರೆ, ನೂರು ವರ್ಷ ರೈತನ ಮನೆಯನ್ನು ಕಾಪಾಡುತ್ತದೆ. ಹೆತ್ತು ಹೊತ್ತು ಸಾಕಿದಂತಹ ಗಂಡುಮಕ್ಕಳು ಚಕ್ಕರ್ ಕೊಟ್ಟು ಹೊರಟುಹೋಗುತ್ತಾರೆ. ಕಲ್ಪವೃಕ್ಷಗಳು ಇದ್ದರೆ ಪ್ರತಿಯೊಂದು ಭಾಗದಲ್ಲೂ ಅನುಕೂಲವಾಗುತ್ತದೆ. ಹಳ್ಳಿಗಳಲ್ಲಿ 10-12 ತೆಂಗಿನಮರಗಳು ಇದ್ದರೆ ಒಂದು ಸಂಸಾರಕ್ಕೆ ಆಗುವಷ್ಟು ಸಂಪಾದನೆ ಬರುತ್ತದೆ. ಅಂತಹ ಕಲ್ಪವೃಕ್ಷ ಇವತ್ತು ಸರ್ವನಾಶವಾಗುತ್ತಿದೆ. ಪ್ರಜ್ಞೆ ಬೇಡವೇ? ಜ್ಞಾನ ಬೇಡವೇ? ಒಂದು ಘನ ಕಾರ್ಯ ಮಾಡಿದ್ದಾರೆ. ಪಂಚಾಯಿತಿಯವರು ಔಷಧಿ ಹೊಡೆಯುತ್ತಾರಂತೆ. ಒಂದು ಕೆಲಸ ಮಾಡಿ, ನಾಲ್ಕು ನಾಲ್ಕು ಪಂಚಾಯಿತಿ ಸೇರಿಸಿ ಒಂದು ಸಣ್ಣ ಅಂಗಡಿ ಇಡಿ. ಪಾಪ ಟೌನ್‌ಗೆ ಬಂದು ಯಾರು ಔಷಧಿ ತೆಗೆದುಕೊಳ್ಳುತ್ತಾರೆ? ಅಲ್ಲೊಂದು ಅಂಗಡಿ ಇಟ್ಟರೆ ಸರಿಯಾಗುತ್ತದೆ. ಇದಕ್ಕಿಂತ ಹೇಯವಾದ ಕೆಲಸ ಇನ್ನಿಲ್ಲ. ಕೇರಳದಲ್ಲಿ ಇಂತಹದ್ದೇ ಕಾಯಿಲೆ ಬಂದಾಗ, ಯಾವ ಭಾಗದಲ್ಲಿ ಕಾಯಿಲೆ ಬಂದಿತ್ತು ಅಲ್ಲಿ ಇಲಾಖೆಯವರು ಕಾಯಿಲೆ ಬಂದಿರುವ ಮರಗಳನ್ನು ಐಡೆಂಟಿಫೈ ಮಾಡಿ ಅವರ ಮತಿಯಿಂದಲೇ ಔಷಧಿ ಹೊಡೆದರು. ಆಗ ಆ ರೋಗ ಕಂಟ್ರೋಲ್‌ಗೆ ಬಂದಿದೆ. ನುಸಿರೋಗಕ್ಕೆ ಇಲಾಖೆಯವರೇ ಔಷಧಿ ಹೊಡೆಯಲಿ. ತೋಟಗಾರಿಕೆ ಮಂತ್ರಿಗಳು ಹಳ್ಳಿಗಳಿಗೆ ಹೋಗಿ ನಾನು ಹಾರ್ಟಿಕಲ್ಚರ್ ಮಿನಿಸ್ಟರ್ ಎಂದು ಹೇಳಿಕೊಂಡಿರಾ? ರೈತರು ಅಷ್ಟು ಹಲ್ಲು ಕಡಿಯುತ್ತಾರೆ. ನೀವು ಹೋದರೂ ನಿಮ್ಮನ್ನು ಯಾರೂ ನೋಡೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಲ್ಲಂ ವೀರಭದ್ರಪ್ಪನವರು ಎಲ್ಲಾ ಕಡೆಗೆ ನಿಗೂಢವಾಗಿ ಹೋಗುತ್ತಿದ್ದಾರೆ. ಮೊನ್ನೆ ಬೆಳಗಾಂಗೆ ಹೋಗಿದ್ದರು.

ಶ್ರೀ ಕೆ.ಹೆಚ್. ಹನುಮೇಗೌಡ :— ಬೆಳಗಾಂನಲ್ಲಿ ತೆಂಗಿನ ಮರ ಇಲ್ಲ. ನಾನು ಎರಡು ಮೂರು ಸಾರಿ ಶಾಸನಸಭೆಯಲ್ಲಿ ಪ್ರಸ್ತಾವ ಮಾಡಿದ್ದೇನೆ. ನೀವು ನಿಮ್ಮ ಇಲಾಖೆಯವರನ್ನು ಕಳುಹಿಸಿ ಕಂಟ್ರೋಲ್ ಮಾಡಿ. ಆಮೇಲೆ ಒಂದು ಮರಕ್ಕೆ ಇಷ್ಟು ಎಂದು ಹಾಕಿ. ಆ ತರಹ ಮಾಡಿದ್ದರೆ ನುಸಿರೋಗ ಕಂಟ್ರೋಲ್‌ಗೆ ಬರುತ್ತಿತ್ತು. ರೈತರಿಗೆ ಸಬ್ಸಿಡಿಯೆಂದು ಹೇಳಿ ಈ ವರ್ಷ 5 ಕೋಟಿ, ಮುಂದಿನ ವರ್ಷ 10 ಕೋಟಿ ರೂ ಔಷಧಿಯನ್ನು ಯಾರಿಗೆ ಕೊಟ್ಟಿದ್ದಾರೆ? ನನಗೆ ನೀವು ಹೊಡೆಸಿಕೊಳ್ಳಿಯೆಂದು ಹೇಳಿದ್ದಾರೆ. ಔಷಧಿ ಯಾವುದು ಒಂದು ಬಂದು ಹೇಳಿದ್ದಾರೆ. ಹಳ್ಳಿಯವರ ತೋಟವನ್ನು ಹೋಗಿ ನೋಡಿದ್ದೀರಾ? ಕರ್ನಾಟಕ ರಾಜ್ಯದಲ್ಲಿ ಕೋಟ್ಯಾಂತರ ತೆಂಗಿನಮರಗಳು ಹೋಗುತ್ತಿವೆ. ಕಲ್ಪವೃಕ್ಷದ ಸಂಪತ್ತು ಇವತ್ತು ಹೋಗುತ್ತಿದೆ. ಮೊನ್ನೆ ನಮ್ಮ ತೋಟದ ಮರಗಳನ್ನು ನಾನು

ಹೋಗಿ ನೋಡಿದೆ. ಎಲ್ಲಾ ಹಾಳಾಗಿ ಹೋಗಿವೆ. ಮಾನ್ಯ ಶ್ರೀಕಂಠಯ್ಯನವರ ತೋಟಕ್ಕೆ ಇದು ಮಿನಿಸ್ಟರ್ ತೋಟವೆಂದು ನುಸಿರೋಗ ಹೆದರಿಕೊಂಡಿರಬೇಕು. ಅಧಿಕಾರಿಗಳು ಮತ್ತು ಮಿನಿಸ್ಟರ್‌ಗಳ ತೋಟಕ್ಕೆ ಅವರು ಬೇಡವೆಂದರೂ ಹೋಗಿ ಇಲಾಖೆಯವರು ಔಷಧಿಯನ್ನು ಹೊಡೆಯುತ್ತಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ನಿಮ್ಮ ತೋಟಕ್ಕೆ ರೈತರ ತೋಟಕ್ಕೆ ಔಷಧಿ ಹೊಡೆಯಿರಿ ಎಂದು ಹೇಳಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ನೀವು ಯಾವ ಜ್ಞಾನದಲ್ಲಿ ಹೇಳಿದಿರೋ ಏನು ಕತೆಯೋ ಗೊತ್ತಿಲ್ಲ. ನಮ್ಮ ತೋಟದಲ್ಲಿ ಹೊಡೆದು ಹೋಗಿರೋ ಎಂದು ಹೇಳುತ್ತಿದ್ರಿ. ಯಾವುದೋ ಜ್ಞಾನದಲ್ಲಿ ಹಾಗೆ ಹೇಳಿಬಿಟ್ಟಿದ್ದೀರಿ. ಇನ್ನೊಂದು ಕಪ್ಪುತಲೆ ಹುಳ, ಇದು ಮೊದಲು ಕಾಣಿಸಿಕೊಂಡಿದ್ದು ನಿಮ್ಮ ಏರಿಯಾದಲ್ಲಿ. ಆ ಸಮಯದಲ್ಲಿ 10-20 ಎಕರೆಗೆ ಬಿದ್ದಿತ್ತು. ಇಲಾಖೆಯವರು ಹೋಗಿ ಔಷಧಿ ಹೊಡೆದು ಕಂಟ್ರೋಲ್ ಮಾಡಿದ್ದರೆ ಅದು ಹೆಚ್ಚು ಬೆಳೆಯುತ್ತಿತ್ತಾ? ನಾನು ಶಿವಮೊಗ್ಗಕ್ಕೆ ಹೋಗಿದ್ದೆ. ಕಡೂರು, ಬೀರೂರು ಮಧ್ಯೆ ನೂರಾರು ಎಕರೆಯಲ್ಲಿ ಸುಳಿ ಒಣಗಿ ಹೋಗಿದೆಯಲ್ಲಾ, ಆ ರೈತರ ಗತಿಯೇನು? ನೀವು ದಯವಿಟ್ಟು ಯೋಚನೆ ಮಾಡಬೇಕು. ನಿಮ್ಮ ಇಲಾಖೆಯವರು ಅಷ್ಟು ತಿರುಗುತ್ತೀರಿ, ನೀವು ಅಲ್ಲೊಂದು ಕ್ಯಾಂಪ್ ಹಾಕಿ ಹೋಗಿ ಔಷಧಿ ಹೊಡೆದು ಬನ್ನಿಯೆಂದು ಹೇಳುವುದಕ್ಕೆ ಆಗಲಿಲ್ಲವಾ? ನೋಡಿದ್ದರೂ ಆ ಜಾಗವನ್ನು? ರೈತರು ಏನೆಂದು ಕೊಂಡಾರು? ನಮ್ಮ ಹಾರ್ಟಿಕಲ್ಚರ್ ಮಿನಿಸ್ಟರ್ ದೊಡ್ಡದಾಗಿ ಮೇಲೆ ಹೋಗಲಿಯೆಂದು ಹೇಳುತ್ತಾರೆಯೇ? ಇವರನ್ನು ಏನನ್ನುತ್ತಾರೆ ಹೇಳಿ? ನಾನು ಹೇಳುವುದು ಬೇಡ. ಅವರೇ ಅರ್ಥ ಮಾಡಿಕೊಳ್ಳಲಿ. ನಿಮ್ಮ ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್‌ಗೆ ಯಾವುದಾದರೂ ಕಾಯಿಲೆ ಬಂದರೆ, ತಕ್ಷಣ ಆ ಭಾಗಕ್ಕೆ ನಿಮ್ಮ ಇಲಾಖೆಯವರನ್ನು ಕಳುಹಿಸಿ ಔಷಧಿಯನ್ನು ಕೊಟ್ಟು ಅದನ್ನು ಸಿಂಪಡಿಸಿ ಅದನ್ನು ಕಂಟ್ರೋಲ್ ಮಾಡಿ. ಆಮೇಲೆ ರೈತನಿಗೆ ನೋಡಿಯಪ್ಪ, ಇಷ್ಟು ಎಕರೆಗೆ ನಾನು ಔಷಧಿ ಹೊಡೆಸಿದ್ದೇನೆ ಹಣವನ್ನು ಕೊಡೆಯೆಂದರೆ ಅವನು ಕೊಡುತ್ತಾನೆ. ಎಲ್ಲಾ ಕಡೆಗೂ ರೋಗ ಹರಡುವುದು ತಪ್ಪುತ್ತದೆ. ಈಗ ರೈತರು ತಲೆ ಎತ್ತುವಹಾಗೆ ಇಲ್ಲ. ಆ ಮಟ್ಟಕ್ಕೆ ಬಂದು ಕುಳಿತಿದೆ. ಏಕೆಂದರೆ ನೀವು ಪಕ್ಷದ ಅಧ್ಯಕ್ಷರಾಗಿರುವುದರಿಂದ ಮಂತ್ರಿ ಚಾರ್ಜ್ ಕೊಟ್ಟುಬಿಡುತ್ತೀರಿ ಅಷ್ಟರೊಳಗೆ ಇದೊಂದು ಒಳ್ಳೆಯ ಕೆಲಸ ಮಾಡಿ ಹೋಗಿ. ಹಳ್ಳಿಗಳ ಕಡೆ ಬರ ಬಂದಾಗ ಕೂಗಾಡುತ್ತೀರಿ, ಆಗ್ರೋ ಬೇಸ್ಡ್ ಇಂಡಸ್ಟ್ರಿಗಳನ್ನು ಏಕೆ ಮಾಡಬಾರದು? ಕೋ-ಆಪರೇಟಿವ್‌ಗಳಿಗೆ ಕೊಟ್ಟಿದ್ದೇವೆ. ಅಲ್ಲಿ ಹುಟ್ಟು ಸಹಕಾರಿಗಳ ಕಾಟ. ತಾಯಿ ಹೊಟ್ಟೆಯೊಳಗಿನಿಂದಲೇ ಸಹಕಾರಿಗಳಾಗಿ ಬಂದಿದ್ದಾರೆ. ಅವರನ್ನು ಯಾರೂ ಹಿಡಿಯುವುದಕ್ಕಾಗುವುದಿಲ್ಲ. ಅವರಿಗೆ ಮೇಯುವುದನ್ನು ಬಿಟ್ಟು ಬೇರೆ ಕೆಲಸವಿಲ್ಲ.

ಹಳ್ಳಿಗಳಲ್ಲಿ ವಿದ್ಯಾವಂತರು ಇದ್ದಾರೆ ಅವರಿಗೆಲ್ಲಾ ಕಡಿಮೆ ಪರ್ಸೆಂಟೇಜ್‌ನಲ್ಲಿ ಲೋನ್ ಕೊಟ್ಟು ಒಂದೊಂದು ಇಂಡಸ್ಟ್ರೀ ಶುರುಮಾಡಿ ಅಂದರೆ ಆಗುವುದಿಲ್ಲವೆ? ಉಪಯುಕ್ತವಾದ ಕೆಲಸವನ್ನು ಏನು ಎಂತು ಎಂದು ಚಿಂತನೆ ಮಾಡಿ, ಕ್ಯಾಬಿನೆಟ್‌ನಲ್ಲಿ ಎಲ್ಲಾ ಸೇರಿಕೊಳ್ಳುತ್ತೀರಿ. ಅಲ್ಲಿ ಈ ದೇಶದ ಸಮಸ್ಯೆಗಳನ್ನೆಲ್ಲಾ ಚರ್ಚೆ ಮಾಡಿಕೊಂಡು ಹೀಗೆ ಮಾಡಬೇಕೆಂದು ವಿಚಾರ ಮಾಡಿ ಮಾಡಬಾರದಾ? ಜನ ಮೆಚ್ಚುವ ಹಾಗೆ ದೇವರು ಮೆಚ್ಚುವ ಹಾಗೆ ಕೆಲಸ ಮಾಡಬಾರದಾ? ಆಮೇಲೆ ಮೈನರ್ ಇರಿಗೇಷನ್ ಅದು ಎಷ್ಟೋ ಸಾವಿರ ಕೋಟಿ ರೂಪಾಯಿಗಳನ್ನು ಜಿಲ್ಲಾಪಂಚಾಯಿತಿಯವರು ತಾಲ್ಲೂಕು ಪಂಚಾಯಿತಿಯವರು ಖರ್ಚು ಮಾಡಿದ್ದಾರೆ. ಎಲ್ಲಿ ಖರ್ಚು ಮಾಡಿದ್ದಾರೆಂದು ನೋಡೋಣ ನಡಿಯಿರಿ. 15-20 ವರ್ಷಗಳಿಂದ ಅದೇ ಕೆರೆ. ಒಂದು ಸಾರಿ ಕೋಡಿ ರಿಪೇರಿ ಮಾಡಿ ದುಡ್ಡು ತೆಗೆದುಕೊಳ್ಳುತ್ತಾರೆ. ಇನ್ನೊಂದು ವರ್ಷ ಬಂಡೆಗೆ ಮಣ್ಣು ಹಾಕಿ ರಿಪೇರಿ ಎಂದು ದುಡ್ಡು ತೆಗೆದುಕೊಳ್ಳುತ್ತಾರೆ. ಮತ್ತೆ ಆಮೇಲೆ ರಿವರ್ಸ್. ಮೊದಲು ಕೋಡಿ, ತೂಬು, ಬಂಡೆ ಹತ್ತು ಹದಿನೈದು ವರ್ಷ ರಿಪೇರಿ ಎಂದು ಹೀಗೆ ಮಾಡಿ ಕೊಂಡು ದುಡ್ಡು ಹೊಡೆದಿದ್ದಾರೆ. ಮಾತೆತ್ತಿದರೆ ಅಧಿಕಾರ ವೀಕೇಂದ್ರೀಕರಣ. ಈ ದೇಶದಲ್ಲಿ ದೊಡ್ಡ ಕ್ರಾಂತಿಯಾದರೆ ಅದು ಅಧಿಕಾರ ವೀಕೇಂದ್ರೀಕರಣ. ಯಾವುದಾದರೂ ಉತ್ತಮವಾದ ಕೆಲಸವಾಗುತ್ತಿದೆಯಾ? ಯಾವುದಾದರೂ ಅವರು ಮಾಡುವ ಮೀಟಿಂಗ್‌ಗೆ ಹೋಗಿದ್ದೀರಾ? ಏಳು ಲಕ್ಷ ಹಣ ಬಂತು ಅಂದರೆ ಅಲ್ಲಿ ಹದಿನೈದು ಜನರು ಇದ್ದರೆ ಎಷ್ಟು ಬರುತ್ತದೆಂದು ಲೆಕ್ಕಹಾಕುತ್ತಾರೆ. ತೆಗೆದುಹಾಕು ನನ್ನದು ಇತ್ತಲಾಗೆ. ಎಂದು ಹೇಳುತ್ತಾರೆ. ಸ್ಕೂಲ್ ಬಿಲ್ಡಿಂಗ್‌ಗಳು ಕಲ್ಲು ಬಿದ್ದುಹೋಗಿವೆ. ಕಲ್ಲುಗಳು ಕಳಚಿಕೊಂಡು ಬೀಳುತ್ತಿವೆ. ಇದು ಮಾನ್ಯ ಶ್ರೀಕಂಠಯ್ಯನವರಿಗೆ ಗೊತ್ತು. ರಿಪೇರಿ ಎಂದು ಹೇಳಿ ಚೆನ್ನಾಗಿರುವ ಬಿಲ್ಡಿಂಗ್‌ಗೆ ಬಿಲ್ ಮಾಡಿ ಅಧಿಕಾರಿಗಳ ಕುತ್ತಿಗೆಪಟ್ಟಿಗೆ ಕೈಹಾಕಿ ಬಿಲ್ ತೆಗೆದುಕೊಳ್ಳುತ್ತಾರೆ. ಹೇಳುವವರು ಇಲ್ಲ, ಕೇಳುವವರು ಇಲ್ಲ. ಮಾತೆತ್ತಿದರೆ ಅಧಿಕಾರ ವೀಕೇಂದ್ರೀಕರಣ ಅಧಿಕಾರ ವೀಕೇಂದ್ರೀಕರಣವಾಗಲಿಲ್ಲ, ಭ್ರಷ್ಟತೆಯ ವೀಕೇಂದ್ರೀಕರಣ. ಏನೂ ಗೊತ್ತಿಲ್ಲದವರ ಕೈಗೆ ಅಧಿಕಾರ ಕೊಟ್ಟು ಈ ರೀತಿ ಮಾಡಿದ್ದಾರೆ. ಮಾನ್ಯ ಶ್ರೀಕಂಠಯ್ಯನವರೇ, ನಮ್ಮ ಊರಿನಲ್ಲಿ ಒಬ್ಬ ಹೆಣ್ಣುಮಗಳು ಮನೆಯ ಕೆಲಸಕ್ಕೆ ಬರುತ್ತಿದ್ದಳು. ಛೇರ್ಮನ್ ಆಗಿದ್ದಳು. ಒಂದು ವರ್ಷವಾದ ಮೇಲೆ ಚೆನ್ನಾಗಿದ್ದೀರಾ ಎಂದು ಬಂದಳು. ನಾನು ಚೆನ್ನಾಗಿದ್ದೇನೆ, ನಿನ್ನ ಛೇರ್ಮನ್‌ಗಿರಿ ಹೇಗಿದೆಯೆಂದೆ. ಅಣ್ಣಾ, ಇದ್ದದ್ದು ಹೇಳಲಾ? ಎಂದಳು. ಹೇಳಮ್ಮ ಅಂದೆ. ಥೂ! ಸಾವಿರಗಟ್ಟಲೆ ಬಂದರೆ ನಿಮ್ಮಂತಹವರು ಹೊಡೆದುಕೊಳ್ಳುತ್ತಾರೆ. ನೂರುಗಟ್ಟಲೆ ಬಂದರೆ ಸೆಕ್ರೆಟರಿ ತೆಗೆದುಕೊಳ್ಳುತ್ತಾನೆ. 40-50 ರೂ. ಸಿಗುತ್ತದೆ ಕಣಣ್ಣಾ ಎಂದಳು. ಇದು ನಿಮ್ಮ ಅಧಿಕಾರ ವೀಕೇಂದ್ರೀಕರಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮದು ಎಂದು ಹೇಳಬೇಡಿ. ನಮ್ಮದು ಎಂದು ಹೇಳಿ. ಏಕೆಂದರೆ ನೀವೆಲ್ಲಾ ಬಿಲ್ ಪಾಸ್ ಮಾಡಿಕೊಟ್ಟಿದ್ದೀರಿ.

37-A

ಶ್ರೀ ಕೆ.ಹೆಚ್. ಹನುಮೇಗೌಡ :— ಹೋಗಲಿ ತಪ್ಪು ಮಾಡಿದ್ದೀರಿ, ಅದನ್ನು ಕರೆಕ್ಟ್ ಮಾಡಿಕೊಂಡು ತಿದ್ದಿಕೊಳ್ಳುತ್ತೀರಾ? ಅದೂ ಇಲ್ಲವಲ್ಲಾ. ಅದಕ್ಕೇ ಸ್ಟಿಕ್‌ಆನ್. ಏನು ಸರ್ವನಾಶವಾಗಲಿ ಎಂದು ಮಾಡಿದ್ದೀರಾ ಹೇಳಿ ನೋಡೋಣ. ನಮ್ಮ ಹಾಸನದ ಮೂರು ಹೋಬಳಿಗಳು ಶಾಂತಿಗ್ರಾಮ, ಕಸಬಾ, ಕಟ್ಟಾ ನಾಲ್ಕೂವರೆ ಕೋಟಿ ರೂಪಾಯಿ ರಸ್ತೆಗೆ ಖರ್ಚು ಹಾಕಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಪದೇ ಪದೇ ಶಾಂತಿಗ್ರಾಮ ಶಾಂತಿಗ್ರಾಮವೆಂದು ಹೇಳುತ್ತೀರಿ. ಮಾನ್ಯ ಶ್ರೀಕಂಠಯ್ಯನವರ ತಾಯಿ ಊರು ಶಾಂತಿಗ್ರಾಮ. ಹಿರಿಸಾವೆ ಅವರ ತಂದೆ ಊರು. ನಿಮ್ಮದು ಮತಕ್ಷೇತ್ರ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಮಿಡಲ್ ಸ್ಕೂಲ್ ಓದಿದ್ದು ಅಲ್ಲಿಯೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದಕ್ಕೆ ನೀವು ಮೂರನೆಯ ಸಲ ಶಾಂತಿ ಗ್ರಾಮ ಎಂದು ಹೇಳುತ್ತೀರಿ.

ಶ್ರೀ ಕೆ.ಹೆಚ್. ಹನಮೇಗೌಡ :— ಅಯ್ಯೋ ರಾಮ, ನಾನು ನೋಡಿದ್ದು ನನ್ನ ಕ್ಷೇತ್ರದ್ದು ಹೇಳದೆ ಇನ್ನೇನು ಗುಲ್ಬರ್ಗದ್ದು ಹೇಳಲಿಕ್ಕೆ ಹೋಗಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆ ಗುಲ್ಬರ್ಗದ್ದು ಹೇಳುವುದು ಬೇಡ. ಆ ಕಡೆಯದು ಬೇಲೂರೂ ಆಲೂರು ಅವು ಇವು ಎಲ್ಲಾ ಇವೆಯಲ್ಲ ಅವುಗಳನ್ನಾದರೂ ಹೇಳಿ. ಹೊಳೇನರಸೀಪುರ ಹಾಸನ ಇವೆಲ್ಲಾ ಹೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ :— ಕಾಮಗಾರಿ ಮಾತನಾಡುತ್ತಿದ್ದೇನೆ ಗೊತ್ತಾಯಿತಾ? ಆ ದೊಡ್ಡ ಸ್ವಾಮಿಗಳ ಹೆಸರು ಹೇಳುವುದು ಬೇಡ. ಸ್ವಾಮಿ, ಹಿಂದೆ ಇದ್ದಹಾಗೆ ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿ ಒಂದು ಒಳ್ಳೆ ಕೆಲಸ ಮಾಡಿ. ಮೈನರ್ ಇರಿಗೇಷನ್ ಇಲಾಖೆ ಎಂದು ಮಾಡಿ ಅಧಿಕಾರಿಗಳ ವ್ಯವಸ್ಥೆ ಮಾಡಿ. ಅವರು ಹೋಗುತ್ತಾರೆ, ಸರ್ವೆ ಮಾಡುತ್ತಾರೆ, ಕೆರೆ ರಿಪೇರಿ ಮಾಡುತ್ತಾರೆ, ರಿಸ್ಟೋರ್ ಮಾಡುತ್ತಾರೆ ಮತ್ತು ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡುತ್ತಾರೆ. ನಂತರ ಬೇರೆ ಕೆರೆಗೆ ಹೋಗುತ್ತಾರೆ. ಹೀಗೆ ಆಗುವುದರಿಂದ ಐದು ವರ್ಷದೊಳಗೆ ಇಡೀ ರಾಜ್ಯದಲ್ಲಿರುವ ಎಲ್ಲಾ ಕೆರೆಗಳ ರಿಪೇರಿ ಆಗುತ್ತದೆ. ನೀವು ಇದನ್ನು ಏಕೆ ಮಾಡಬಾರದು? ಗೊತ್ತಿದ್ದರೂ ಕೂಡ ನಿಮಗೆ ಮಾಡುವುದಕ್ಕೆ ಏಕೆ ಆಗುವುದಿಲ್ಲ? ನಿಮಗೆ ಹಿಂದಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಇದೊಂದು ಊರಿನಲ್ಲಿ 150 ಮನೆಗಳು. ಪಕ್ಕದಲ್ಲಿ ಒಂದುವರೆ ಕಿಲೋಮೀಟರ್‌ನಲ್ಲಿ ಇನ್ನೊಂದು ಸಣ್ಣ ಹಳ್ಳಿ. ಆ ಮೆಂಬರ್‌ಗೆ ಅದೆಷ್ಟೋ ಲಕ್ಷ ದುಡ್ಡು ಬಂದಿದೆ. ಈ ಊರಿನಿಂದ ಆ ಹಳ್ಳಿಗೆ ಒಂದು ಬ್ಯಾರೇಜ್‌ನಲ್ಲಿ ನೀರು ಬರುವಹಾಗಿಲ್ಲ. ಇದಕ್ಕೆ ಅತ

ದುಡ್ಡು ತೆಗೆದುಕೊಂಡ. ಮುಂದಿನ ವರ್ಷ ಮತ್ತೆ ಗ್ರಾಂಟ್ ಬರುತ್ತದಲ್ಲಾ, ಅದನ್ನು ಹಂಚಿಕೊಳ್ಳುತ್ತಾರೆ. ಆ ಊರಿನಿಂದ ಇಲ್ಲಿಗೆ ತೋರಿಸಿದ. ಆ ದುಡ್ಡನ್ನೂ ತೆಗೆದುಕೊಂಡ. ಆಮೇಲೆ ಮುಂದಿನ ಊರಿಗೆ ಮಧ್ಯದಿಂದ ಈ ಕಡೆಗೆ ಅರ್ಧ, ಆ ಕಡೆಗೆ ಅರ್ಧ ಎಂದು ತೋರಿಸಿ ಮತ್ತೆ ದುಡ್ಡು ತೆಗೆದುಕೊಂಡ. ಆಮೇಲೆ ಮೆಂಬರ್‌ಗಿರಿ ಹೋಗುವ ಆರು ತಿಂಗಳ ಮುಂಚೆ ಇನ್ನೊಂದು ರಿಪೇರಿ ಎಂದು ಇದು ನಡೆಯುತ್ತಲೇ ಇರತಕ್ಕಂಥಾದ್ದು. ಬಡವರಿಂದ ತೆಗೆದುಕೊಂಡ ದುಡ್ಡು ಈ ರೀತಿ ದುರ್ವ್ಯಯ ಆಗುತ್ತಿದೆ. ಹೇಳುವವರಿಲ್ಲ, ಕೇಳುವವರಿಲ್ಲ, ಇನ್ನು ಕೆಲವರು ಐ.ಎ.ಎಸ್. ಅಧಿಕಾರಿಗಳನ್ನು ಜಿಲ್ಲಾ ಪಂಚಾಯತ್‌ಗೆ ಹಾಕಿಬಿಟ್ಟಿದ್ದೀರಿ. ಅವರದ್ದು ಶ್ರೀಮದ್ ಗಾಂಭೀರ್ಯ. ಯಾರೂ ಏನೂ ಬೇಕಾದರೂ ಅರಿದುಕೊಳ್ಳಬಹುದು. ಅವರು ಹರ ಅನ್ನುವುದಿಲ್ಲ, ತುಟಿಕ್ ಪಿಟಿಕ್ ಅನ್ನುವುದಿಲ್ಲ. ಯಾಕೆ? ಒಬ್ಬರನ್ನಾದರೂ ಕರೆದು ಬಯ್ಯುವುದಕ್ಕೂ ಇಲ್ಲ. ಆದರೆ ಒಂದು ಲೈನ್ ಬರೆದರು. ಇಲ್ಲದಿದ್ದರೆ ಸುಮ್ಮನೆ ಕುಳಿತುಬಿಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಅಧ್ಯಕ್ಷರೇ, ಈಗ ಅವರ ಪ್ರಕಾರ ಹೇಳಿದರೆ, ಹುಟ್ಟು ಸಹಕಾರಿಗಳನ್ನು ಬಯ್ದರು, ಅಧಿಕಾರ ವಿಕೇಂದ್ರೀಕರಣವನ್ನು ಬಯ್ದರು ಮತ್ತು ಈಗ ಐ.ಎ.ಎಸ್. ಆಫೀಸರ್‌ಗಳನ್ನೂ ಬಯ್ದರು....

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಬಯ್ದಿದ್ದೀನಾ? ಸ್ವರ್ಗ ಇದ್ದದ್ದೋ ಇವರ ಕಾಲದಲ್ಲಿ...

ಶ್ರೀ ಎಸ್.ಎಸ್. ಪಾಟೀಲ್ :— ಒಂದು ನಿಮಿಷ. ಇಷ್ಟೆಲ್ಲಾ ಐ.ಎ.ಎಸ್. ಅಧಿಕಾರಿಗಳನ್ನು ಬಯ್ಯುವವರು ಆ ಕೆ.ಎಂ.ಎಫ್.ಗೆ ಐ.ಎ.ಎಸ್. ಆಫೀಸರ್‌ನ್ನು ಎಂ.ಡಿ.ಯನ್ನಾಗಿ ಹಾಕಬೇಕೆಂದು ಬರೆದಿದ್ದಾರೆ. ಅವರ ವರದಿಯೊಳಗೆ ಕೆ.ಎಂ.ಎಫ್.ಗೆ ಎಂ.ಡಿ.ಯನ್ನು ಐ.ಎ.ಎಸ್. ಆಫೀಸರ್‌ನ್ನು ಹಾಕಬೇಕೆಂದು ಬರೆದಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಹೇಳುತ್ತೇನೆ, ಕುಳಿತುಕೊಳ್ಳಿ. ಐ.ಎ.ಎಸ್. ಆಫೀಸರ್ ಅವರು ಒಬ್ಬರೇ ದುಡ್ಡು ಹೊಡೆದರು ಎಂದು ನಾನು ಬಯ್ದಿದ್ದೀನಾ ಇವರ ಹಾಟ ತಡೆಯಲಾರದೆ ಅವರು ಸುಮ್ಮನೆ ಕುಳಿತುಕೊಳ್ಳುತ್ತಾರೆ. ಅಂತಹ ಕಾನೂನು ಮಾಡಿ, ಹೀಗೆ ಎಲೆಕ್ಟ್‌ಮಾಡಿ ಕೂಡಿಸಿರುವ ದೃಷ್ಟಿಯಿಂದ ನಾನು ಹೇಳಿದ್ದೇನೆ ವಿನಹ ಐ.ಎ.ಎಸ್. ಅಧಿಕಾರಿಗಳನ್ನು ನಾನು ಬಯ್ದಿಲ್ಲ. ಇವರ ಕಸಬು ಹೇಗೆ ಇದೆ ನೋಡಿ. ಪಾಪ, ಇವರ ಸಹಕಾರ ಇಲಾಖೆ ಸರ್ವನಾಶವಾಗಿ ಹೋಯಿತಂತೆ. ಹುಟ್ಟು ಸಹಕಾರಿಗಳು ಉದ್ಭವ ಆಗಿದ್ದು ಇವರ ಕಾಲದಲ್ಲೇ ಮತ್ತು ಅದು ಉಚ್ಛ್ರಾಯ ಸ್ಥಿತಿಗೆ ಹೋದದ್ದೂ ಕೂಡ ಇವರ ಕಾಲದಲ್ಲೇ. ಈಗ ಒಂದೊಂದಾಗಿ ಕೆಳಗಿಳಿಯುತ್ತಿದ್ದಾರೆ. ಸ್ವಾಮಿ, ನಾನು ಯಾರನ್ನೂ ಬಯ್ಯುವುದಿಲ್ಲ. ನಾವು ಇರುವುದು ವಿರೋಧಪಕ್ಷದಲ್ಲಿ ಮತ್ತು ನಮಗೆ ಕೆಲಸ ಆಗಬೇಕಾಗಿದೆ.

ಒಳ್ಳೆಯದು ಆದರೆ ಒಳ್ಳೆಯದಾಯಿತು ಎಂದು ಹೇಳುತ್ತೇನೆ. ಕಿಟ್ಟದ್ದು ಆದರೆ ಅವರ ಎದುರಿಗೇ ಹೇಳುತ್ತೇನೆ. ಸ್ವಾಮಿ, ನೀವು ಅಲ್ಲಿ ಕೂತಿದ್ದೀರಿ. ಹಾಗೋಡು ತಿಮ್ಮಪ್ಪನವರು ಕೂತಿದ್ದರು ಮತ್ತು ಇನ್ನೊಬ್ಬರು ಮಂತ್ರಿಗಳು ಕೂತಿದ್ದರು. ನಾನು ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಬಗ್ಗೆ ಅವತ್ತು ಹೇಳಿದ್ದೆ. ಇವರು ಬಹಳ ಪ್ರಾಮಾಣಿಕ ಅಧಿಕಾರಿ ಎಂದು ಹೇಳಿದೆ. ಅವರು ಏನೋ ಹನುಮೇಗೌಡರು ಹೊಗಳುತ್ತಿದ್ದಾರೆ ಎಂದು ತಿಳಿದುಕೊಂಡರು. ನಾನು ಅವರ ಎದುರುಗಡೆಯೇ ಹೇಳಿದ್ದೆ. ಮಾಮೂಲಿ ಬಿಲ್ಲಿಗೆ 3 ಪರ್ಸೆಂಟ್ ಮತ್ತು ಒಂದು ಚೂರು ಹೆಚ್ಚುಕಡಿಮೆಯಾದರೆ 5 ಪರ್ಸೆಂಟ್. ಸುಳ್ಳು ಬಿಲ್ಲ್ ಎಂದರೆ 40 ಪರ್ಸೆಂಟ್. ಆದ್ದರಿಂದ ಇವರು ಪ್ರಾಮಾಣಿಕರು ಎಂದು ಹೇಳಿದ್ದೆ. ಅವರನ್ನು ಬೇಕಾದರೆ ಕೇಳಿ ನೋಡಿ. ಇವತ್ತು ನಿರ್ಭೀತಿಯಿಂದ ಆ ಮನುಷ್ಯ ಮೆರೆಯುತ್ತಿದ್ದಾನೆ, ಅದು ಅಷ್ಟಿಷ್ಟಲ್ಲ. ಯಾರೂ ಹೇಳುವಹಾಗಿಲ್ಲ ಮತ್ತು ಕೇಳುವಹಾಗಿಲ್ಲ. ಆದ್ದರಿಂದ ಪಾಟೀಲರೇ, ನನಗೆ ದಾಕ್ಷಿಣ್ಯ ಇಲ್ಲ. ನಾನು ಒಬ್ಬ ರೈತನ ಮಗ ಮತ್ತು ನಾವು ದೇಶಕ್ಕೆ ಅನ್ನ ಕೊಡುವ ಜನ. ನಾವು ಕೈಯಿಂದ ಕೊಡುತ್ತೇವೆಯೇ ವಿನಹ ಬೇಡುವುದಿಲ್ಲ. ನಮಗೆ ಯಾವುದೇ ದಾಕ್ಷಿಣ್ಯ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಹಾಸನದಿಂದ ಹುಟ್ಟಿದವರೆಲ್ಲರೂ ಮಣ್ಣಿನ ಮಕ್ಕಳು. ಹಾಗಾದರೆ ಉಳಿದವರ ಗತಿ ಏನು ಸ್ವಾಮಿ? ಉಳಿದವರೆಲ್ಲರೂ ಯಾರ ಮಕ್ಕಳು?

ಶ್ರೀ ಕೆ.ಹೆಚ್. ಹನುಮೇಗೌಡ :— ಅಯ್ಯೋ ಪಾಪ, ಇವರು ಒಬ್ಬರೇ ಮಣ್ಣಿನ ಒಳಗಿನಿಂದ ಮೇಲೆ ಬಂದುಬಿಟ್ಟಿದ್ದಾರೆ. ಪಾತಾಳದಿಂದ ಮೇಲೆ ಬಂದುಬಿಟ್ಟಿದ್ದಾರೆ. ಉಳಿದವರೆಲ್ಲರೂ ಪಾಪ, ಹೆಂಗಸರ ಹೊಟ್ಟೆಯಿಂದ ಹುಟ್ಟಿದವರು. ನಾಟಕೆಯಾಗುವುದಿಲ್ಲವೇ ಹಾಗೆ ಹೇಳುವುದಕ್ಕೆ?

ಶ್ರೀ ಕೆ. ಶ್ರೀನಿವಾಸಗೌಡ :— ಈಗತಾನೆ ಹೇಳಿದಿರಿ ನಾನೂ ಕೂಡ ಒಬ್ಬ ರೈತನಮಗ, ಮಣ್ಣಿನ ಮಗ ಎಂದು.

ಶ್ರೀ ಕೆ.ಹೆಚ್. ಹನುಮೇಗೌಡ :— ರೈತನ ಮಗ ಅನ್ನಿ, ಮಣ್ಣಿನ ಮಗ ಅನ್ನಬೇಡಿ. ಅದು ಯಾವನೋ ತೆಗೆದುಕೊಂಡ ಟೈಟಲ್‌ನ್ನು ನನಗೆ ಯಾಕೆ ಕೊಡುತ್ತೀರಿ? ಅದನ್ನು ನೀವು ಅವನಿಗೇ ಕೊಟ್ಟುಕೊಳ್ಳಿ.

ಚೇರ್ಮನ್ :— ಮಾನ್ಯ ಶ್ರೀನಿವಾಸಗೌಡರೇ, ಇಷ್ಟರ ತನಕ ಅವರು ಬಹಳ ಸಂಯಮದಿಂದ ಇದ್ದಾರೆ. ಅವರನ್ನು ನೀವು ಕೆಣಕುವುದಕ್ಕೆ ಹೋಗಬೇಡಿ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಇರುವ ವಿಚಾರವನ್ನು ಹೇಳುವುದು. ನಾನು ಮಣ್ಣಿನ ಮಗ ಎಂದು ಹೇಳಿಕೊಂಡಿಲ್ಲ. ನಾನು ತಾಯಿಯ ಹೊಟ್ಟೆಯಿಂದ ಹುಟ್ಟಿ

ಬಂದವನು. ನಾನು ಒಬ್ಬ ರೈತನ ಮಗ. ಸ್ವಾಮಿ, ಇವತ್ತು ಬರ ಬಂದಿದೆ, ಯಥೇಚ್ಛವಾದ ನೀರು ಇದೆ. ಕೃಷ್ಣಾದಲ್ಲಿ ನೀರಿದೆ, ಕಾವೇರಿಯಲ್ಲಿ ನೀರಿದೆ. ಕಾವೇರಿಯನ್ನು ಸೃಷ್ಟಿಮಾಡಿಕೊಟ್ಟಿರುವುದು ದೇವರು ನಮಗೆ ಕೊಟ್ಟಿರುವ ವರ. ನಾನು ಅವತ್ತು 1972ನೇ ಇಸವಿಯಲ್ಲಿ ಚನ್ನಬಸಪ್ಪನವರು ಇದ್ದಾಗ ಒಂದು ಪ್ರಶ್ನೆ ಕೇಳಿದ್ದೆ. ಅದು ತಮಗೆ ಗೊತ್ತಿರಬೇಕು ಅಥವಾ ಜ್ಞಾಪಕ ಇರಬಹುದು. ಇಲ್ಲಿ ಇರಿಗೇಟ್ ಆಗುತ್ತಿದ್ದದ್ದು 3 ಲಕ್ಷ ಎಕರೆ ಇರಿಗೇಟ್ ಆಗುತ್ತಿದ್ದರೆ ನಮ್ಮದು 6 ಲಕ್ಷಕ್ಕೂ ಹೋಗಿಲ್ಲ. ಅದೇನೋ ಹೆಚ್.ಕೆ. ಪಾಟೀಲರು ಎಲ್ಲಾ ವಿಷಯದಲ್ಲೂ ಸ್ವಲ್ಪ ಕಟ್ಟುನಿಟ್ಟಿನಿಂದ ಪ್ರಯತ್ನಪಟ್ಟರೂ ಅದು ಆಗಲಿಲ್ಲ. ನಾವು ಅಷ್ಟು ನೀರನ್ನೂ ಉಪಯೋಗಿಸಿಕೊಳ್ಳಬಹುದು. ಪಾಟೀಲರೇ, ನೀವು ಮನಸ್ಸು ಮಾಡಿದರೆ ಮಾಡುತ್ತೀರೇನೋ ಎಂದು ನನಗನ್ನಿಸುತ್ತದೆ. ಏಕೆಂದರೆ ನನಗೆ ಯಾರೋ ಬಂದು ಹೇಳಿದರು ಏನೆಂದರೆ ಹೆಚ್.ಕೆ. ಪಾಟೀಲರು ಉತ್ತರ ಕರ್ನಾಟಕಕ್ಕೆ ಜಾಸ್ತಿ ಖರ್ಚುಮಾಡಿಬಿಟ್ಟಿದ್ದಾರೆ ಎಂದು. ಅದಕ್ಕೆ ನಾನು ಹೇಳಿದೆ ಏನೆಂದರೆ ಕೊನೆಯಪಕ್ಷ ಬಡವರ ಬಗ್ಗೆ, ರೈತರ ಬಗ್ಗೆ ಒಳ್ಳೆಯದು ಮಾಡಬೇಕೆಂಬ ಇಚ್ಛೆ ಇಟ್ಟುಕೊಂಡು ಅವರಿಗೆ ಅನುಕೂಲ ಮಾಡಿಕೊಡುವ ಒಬ್ಬ ಮಂತ್ರಿ ಬಂದಿದ್ದಾರೆ. ಇದು ನಮಗೆ ಬಹಳ ಸಂತೋಷದ ವಿಷಯ. ಈ ವರ್ಷ ಅಲ್ಲಿ ಮಾಡಿದ್ದಾರೆ, ಮುಂದಿನ ವರ್ಷ ಇಲ್ಲಿ ಮಾಡುತ್ತಾರೆ, ಸುಮ್ಮನೆ ನೀವು ಹೋಗಿ ಎಂದು ಹೇಳಿದೆ. ಏಕೆಂದರೆ ಈ ರೈತನಿಗೆ ಒಳ್ಳೆಯದು ಮಾಡಬೇಕು ಎಂಬ ಇಚ್ಛಾಶಕ್ತಿ ಇರತಕ್ಕಂಥ ವ್ಯಕ್ತಿಗಳು ಅಧಿಕಾರದಲ್ಲಿ ಇದ್ದರೆ ದೇಶಕ್ಕೆ ಒಳ್ಳೆಯದಾಗುತ್ತದೆ. 1972ರಿಂದ ಇಲ್ಲಿಯವರೆಗೆ ಬರೇ ಕೊಕ್ಕೆ ಹಾಕಿದರಲ್ಲಾ, ಸ್ವಾಮಿ? ಅದಕ್ಕೆ ತಕ್ಕ ಹಾಗೆ ಈ ಇಂಜಿನಿಯರುಗಳು ಇದ್ದಾರೆ. ಕೆಲವರು ತಮಿಳು ನಾಡಿಗೆ ನೀರು ಕೊಡುವುದಕ್ಕೆ ಕೊಕ್ಕೆಹಾಕಿಕೊಂಡೇ ಕೂತಿದಾರಲ್ಲಾ, ಅವರಲ್ಲಿ ನಾಲ್ಕು ಜನರನ್ನು ಒಳಗೆ ಹಾಕುತ್ತೀರಾ? ಅವರೇ ಈ ದೇಶವನ್ನು ಹಾಳುಮಾಡುವಂಥವರು, ರಾಜಕಾರಣಿಗಳಿಗೆ ಇಚ್ಛಾಶಕ್ತಿ ಇಲ್ಲ, ಅವರು ಸೇರಿಕೊಂಡು ಒಟ್ಟಿನಲ್ಲಿ ಈ ಭಾಗದ ಜನರು ನಾವಂತೂ ಪಾಪರೆಬಿದ್ದು ಹೋಗಿದ್ದೇವೆ. 62 ಪರ್ಸೆಂಟ್ ನೀರು ಕೊಡುವವರು ನಾವು, ತಮಿಳುನಾಡಿನಿಂದ ನೀರು ಎಷ್ಟು ಎಂದರೆ 60-42 ಪರ್ಸೆಂಟ್ ಇರಬಹುದು. ಮಾನ್ಯ ನಿಜಲಿಂಗಪ್ಪನವರು, ವಿರೇಂದ್ರಪಾಟೀಲರು ಹಾರಂಗಿ ಅಥವಾ ಹೇಮಾವತಿಯನ್ನು ಕಟ್ಟದೆ ಇದ್ದಿದ್ದರೆ ನೀವು ಕಟ್ಟುತಿದ್ದಿರಾ? ಏನೋ ಆ ವೇಳೆಗೆ ಕಟ್ಟಿಬಿಟ್ಟರು. ಅದಕ್ಕೆ ಈ ದೇಶದ ಜನರು ದುಡ್ಡು ಕೊಟ್ಟಿರುವುದು ಸ್ವಾಮಿ. ಬಡವರ ಹಣದಿಂದ ಡ್ಯಾಮ್ ಕಟ್ಟಿ ನಾವು ಇಲ್ಲಿ ನೀರು ಸ್ಟೋರ್ ಮಾಡುವುದು, ಆದರೆ ಅವರು ಕೇಳಿಕೇಳಿದಾಗೆಲ್ಲಾ ನೀರು ಕೊಟ್ಟರಲ್ಲಾ, ಇದಕ್ಕೆ ಏನು ಹೇಳಬೇಕು? ಆ ಅಮ್ಮನನ್ನು ಹಿಡಿಯುವುದಕ್ಕೆ ಕೇಳಿಕೇಳಿದಾಗೆಲ್ಲಾ ನೀರು ಕೊಟ್ಟರು. ಪರಿಸ್ಥಿತಿ ಏನು ಮಾಡಿ ಇಟ್ಟುಕೊಂಡಿದ್ದಾರೆ ನೋಡಿ. ಅಲ್ಲಿ 37 ಲಕ್ಷ ಎಕರೆ ನೀರಾವರಿಯಾಗುತ್ತಿದೆಯಲ್ಲಾ, ಇಲ್ಲಿ ನಮ್ಮ ಗತಿ ಏನು? ದಯವಿಟ್ಟು ನೀವು ಮನಸ್ಸು ಮಾಡಿ ನಿಮ್ಮಕಡೆ ಮಾಡಿಕೊಳ್ಳಿ. ಇನ್ನೂ ಸಾಲದೇ ಹೋದರೆ ಹೇಳಿ, ನಾವು ಕೈಯಿತ್ತುತ್ತೇವೆ.

ಮುಂದಿನ ವರ್ಷಕ್ಕೆ ಕಾವೇರಿ ಬೇಸಿನ್‌ನಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಆಗಬೇಕೋ ಅದೆಲ್ಲಾ ಮಾಡಿಕೊಳ್ಳಿ. ಅವತ್ತು ಪಾಪ ಯುಗಚಿ ಪ್ರಾಜೆಕ್ಟ್ 18 ವರ್ಷಗಳಿಂದ ನಿಂತುಬಿಟ್ಟಿತ್ತು. ನೀವು ಕೂಡಲೆ ಅಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿ ಪರಿಹಾರ ಕೊಡುವುದನ್ನು ಹೇಳಿ ವ್ಯವಸ್ಥೆ ಮಾಡಿದ್ದೀರಿ. ನಾನು ಬಹಳ ಸಂತೋಷಪಟ್ಟೆ. ಅವತ್ತು ನಾನು ಹೇಳಿದ್ದು ನಿಮಗೆ ನೆನಪು ಇದೆಯಾ? ನೀವು ಹದಿನೈದು ವರ್ಷಗಳಿಗೆ ಮೊದಲೇ ನೀರಾವರಿ ಮಂತ್ರಿಯಾಗಿದ್ದರೆ ಪಾಪ, ಈ ರೈತರಿಗೆ ಇನ್ನೂ ಬಹಳ ಒಳ್ಳೆಯದಾಗುತ್ತಿತ್ತು ಎಂಬ ಮಾತನ್ನು ಹೇಳಿದ್ದೇ. ಧೈರ್ಯವಾಗಿ ಯಾರ ಮುಲಾಜಿಗೂ ಒಳಗಾಗದೇ ಕೆಲಸ ಮಾಡಿ. ಮಾನ್ಯ ದಿವರಂಗತ ಕೆ.ಹೆಚ್. ಪಾಟೀಲರೂ ಹಾಗೆಯೇ ಇದ್ದರು. ನೀವು ಕೂಡ ಅದೇ ತರಹ ಕಾಣ್ತೇರಾ....

ಶ್ರೀ ಕೆ. ಶ್ರೀನಿವಾಸಗೌಡ :— ಹೆಚ್.ಕೆ ಪಾಟೀಲರು ಪುಣ್ಯ ಮಾಡಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಪುಣ್ಯ ಮಾಡಿದ್ದರೆ, ಇನ್ನೂ ಹೆಚ್ಚು ಪುಣ್ಯ ಸೇರಿಸಿಕೊಂಡು ಮುಂದಿನ ಜನ್ಮದಲ್ಲಿ ಇನ್ನೂ ದೊಡ್ಡ ವ್ಯಕ್ತಿಯಾಗಿ ಹುಟ್ಟುತ್ತಾರೆ. ಇಲ್ಲ ಕೊಟ್ಟ ಅವಕಾಶವನ್ನು ನುಂಗಿ, ನುಂಗಿ ಎಲ್ಲರಿಗೂ ಹಾಳು ಮಾಡಿ ಹೋದರೆ, ಮುಂದಿನ ಜನ್ಮದಲ್ಲಿ ನನ್ನ ಹಾಗೆ ಇಲ್ಲಿ ನಿಂತುಕೊಂಡು ಬೊಬ್ಬೆ ಹೊಡಿಯುತ್ತೇನಲ್ಲಾ ಹಾಗೆ ಹೊಡೆಯಬೇಕಾಗುತ್ತದೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ತಮಗೆ ತುಂಬಾ ಧನ್ಯವಾದಗಳು. ನಮಗೆ ಇರುವ ನೋವನ್ನು ಹೇಳುಕೊಂಡಿದ್ದೇವೆ. ನಾನು ಇಂಗ್ಲೀಷ್ ಜಾಸ್ತಿ ಓದಿದವನಲ್ಲ. ಪಟಾ ಪಟಾ ಮಾತನಾಡುವುದಕ್ಕೂ ನನಗೆ ಬರುವುದಿಲ್ಲ. ನಾನು ಹಳ್ಳಿ ರೈತನ ಮಗ. ಒರಟು ಭಾಷೆಯಲ್ಲಿ ಹೇಳಿದ್ದೇನೆ. ಕೇಳಿದ ಜನರಿಗೆ ಅರ್ಥ ಮಾಡಿಕೊಂಡವರಿಗೆ ಅನಿಸುತ್ತೆ. ಇನ್ನು ಕೊನೇ ಒಂದೂವರೆ ವರ್ಷದಲ್ಲಿ ಈ ಭಾಗದಲ್ಲಿ ಕೊಕ್ಕೆ ಹಾಕಿ ಪ್ರಾಜೆಕ್ಟ್ ಆಗದೇ ಅಲ್ಲಲ್ಲೇ ನಿಲ್ಲಿಸಿ, ನಿಂತಿದ್ದಾರಲ್ಲಾ, ಮೊನ್ನೆ ಮಾಡಿದರಲ್ಲಿ ಯುಗಚಿ ಪ್ರಾಜೆಕ್ಟ್‌ಗೆ ಅದೇ ರೀತಿಯ ಮೀಟಿಂಗ್ ಮಾಡಿ ಮುಗಿಸಿ ಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಬಹುಶ: ನನಗೆ ಅನ್ನಿಸುತ್ತೆ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ನಲ್ಲೋ ಅಥವಾ ಇರಿಗೇಷನ್ ಸಬ್ಜೆಕ್ಟ್ ಕಮಿಟಿಯ ವರದಿಯೋ ಅಥವಾ ಎಲ್ಲಿಯೋ ಓದಿದಹಾಗೆ ನೆನಪಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಕಾಸ್ಟ್‌ಲಿಯೆಸ್ಟ್ ಪ್ರಾಜೆಕ್ಟ್ ಎಂದರೆ ಯುಗಚಿ. ಇದರಲ್ಲಿ ಒಂದು ಎಕರೆಯಲ್ಲಿ ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ. ಹೆಚ್ಚು ಕಡಿಮೆ ಒಂದು ಲಕ್ಷಕ್ಕಿಂತಲೂ ಹೆಚ್ಚಿಗೆ ಬರುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಎಕರೆಗೆ ಒಂದೊಂದು ಬೇರ್ ವೆಲ್ಲೇ ಕೋಡಬಹುದಿತ್ತು. ಅಷ್ಟೊಂದು ಹಣ ಪೋಲ್ ಮಾಡಿ, ಆ ರೂಪಕ್ಕೆ ಬಂದಿದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಆಗ ನಾನು ಇಂಜಿನಿಯ್ ಆಗಿದ್ದನೇ? ನಾನು ಮಂತ್ರಿಯಾಗಿದ್ದನೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹಾಸನದ ಕಥೆಯನ್ನು ಹೇಳಿದರೆ, ನಾವು ಸಿಟ್ಟಿಗೆ ಬರುತ್ತೀರಿ. ಇಲ್ಲವೇ ನಾವು ಹೊಳೆನರಸೀಪುರದ ಬಗ್ಗೆಯೂ ಮಾತನಾಡುವುದಿಲ್ಲ. ಹಾಸನದ ಬಗ್ಗೆಯೂ ಬೇಡ ಎಂದು ಹೇಳುತ್ತೀರಿ. ಯುಗಚಿ ಬಗ್ಗೆಯೂ ಬೇಡ ಎಂದು ಹೇಳುತ್ತೀರಿ. ಅರಸಿಕೆರೆ ವಿಚಾರವನ್ನೂ ಬೇಡ ಎಂದು ಹೇಳುತ್ತೀರಿ. ಹಾಗೆಂದಮೇಲೆ ಏನೂ ಮಾತನಾಡುವುದು ಹೇಳಿ. ನಿಮ್ಮದು ಮತ್ತು ಅವರಿಬ್ಬರದೇ ಮಾತನಾಡೋಣವೇ?

ಶ್ರೀ ಕೆ.ಹೆಚ್. ಹನುಮೇಗೌಡ :— ಕಾರಂಜಾ ವಿಷಯ ನಿಮಗೆ ಜ್ಞಾಪಕವಿರಬಹುದು, ನೀವೂ ಮೂವ್ ಮಾಡಿದಿರಿ. ಮಾನ್ಯ ದೇವರಾಜ ಅರಸುರವರು ಅದೇ ಜಾಗದಲ್ಲಿ ಕುಳಿತುಕೊಂಡು 8 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದರು. ಆ ಕಾರಂಜಾ ಪ್ರಾಜೆಕ್ಟ್ ನ್ನು ಎರಡು ವರ್ಷದೊಳಗೆ ಮುಗಿಸಬೇಕೆಂದು ಆದೇಶ ಕೊಟ್ಟರು. ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯನಾಗಿದ್ದಾಗ, ತನಿಖೆಗೆ ಹೋಗಿದ್ದೆವು. 350 ಕೋಟಿ ರೂ. ಖರ್ಚಾಗಿದೆ, ಇನ್ನೂ 450 ಕೋಟಿ ರೂ. ಖರ್ಚಾಗಬೇಕು. ಅದಕ್ಕೆ ಇನ್ನೂ ದುಡ್ಡು ಬೇಕು. ಅದರಲ್ಲಿ ದುಡ್ಡನ್ನು ಹೊಡೆದಿದ್ದಾರೆ, ಹೊಡೆದಿದ್ದಾರೆ ಎಂದರೆ, ಅದನ್ನು ಹೇಳುವುದಕ್ಕಾಗುವುದಿಲ್ಲ ಯುಗಚಿಯಲ್ಲೂ ಹೊಡೆದಿದ್ದಾರೆ. ಅಲ್ಲಿಯೂ ಹೊಡೆದಿದ್ದಾರೆ. ಕೃಷ್ಣಪ್ಪನವರು ಇಲ್ಲೇ ಕುಳಿತ್ತಿದ್ದಾರೆ. ಅವರು ಡೈರಿ ಇಟ್ಟಿದ್ದರೆ? ಅವರಿಗೆ ಜವಾಬ್ದಾರಿ ಇರಲಿಲ್ಲವೇ, ಅವರಿಗೆ ಗೊತ್ತಿರಲಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಯುಗಚಿ ಮುಗಿಸಿಕೊಳ್ಳಿ ಎಂದು 3-4 ಜನಕ್ಕೆ ಮಂತ್ರಿಗಳನ್ನು ಮಾಡಿ, ಇರಿಗೇಷನ್ ಕೊಡಲಾಗಿತ್ತು.

ಶ್ರೀ ಕೆ.ಹೆಚ್. ಹನುಮೇಗೌಡ :— ಕೊನೇಪಕ್ಷ ಇದನ್ನಾದರೂ ಒಂದನ್ನು ಮುಗಿಸಿಕೊಡಿ. ಈ ಭಾಗದ ಜನರೆಲ್ಲಾ ನಿಮಗೆ ಹಾಡಿ, ಹೊಗಳಿ ಹರಸುತ್ತಾರೆ. ಇದೊಂದೇ ಜಾಗದಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರು ಪದೇಪದೇ ಹೇಳಿದರು. ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಮಾಡಿದ್ದೀರಿ, ಇನ್ನೂ ಮಾಡಿ, ಆದರೆ ಕೊನೆಯ ವರ್ಷವಾದರೂ ನಮ್ಮದನ್ನು ಮಾಡಿ ಎಂದು ವಿನಯದಿಂದ, ನಮ್ರತೆಯಿಂದ ಟೀಕಾಸ್ತ್ರವನ್ನು ಬಿಟ್ಟರು. ನಾನು ಅವರಿಗೆ ನೆನಪು ಮಾಡಿಕೊಡುತ್ತೇನೆ. ಅವರು ಅಂದಾಜು ಸಮಿತಿಯ ಅಧ್ಯಕ್ಷರು ಇದ್ದು. ನಾನು ಆ ಕಮಿಟಿಯಲ್ಲಿ ಸದಸ್ಯನಾಗಿದ್ದೇ. ಬಹುತೇಕ ಅವರು ನೆನಪು ಮಾಡಿಕೊಂಡರೆ, ಉತ್ತರ ಕರ್ನಾಟಕದಲ್ಲಿ ಅಂಕಿ ಸಂಖ್ಯೆಗಳನ್ನು ತರಿಸಿದ್ದೇನೆ.

ದ

ಆಫೀಸು ಮತ್ತು ಇಲ್ಲೊಂದು ಇದೆ. ಅಂಕಿಸಂಖ್ಯೆಗಳನ್ನು ತರಿಸಿದರೆ, ಆಯವ್ಯಯದಲ್ಲಿ ಇದ್ದಂಥ ಹಣ ಉತ್ತರ ಕರ್ನಾಟಕಕ್ಕೆ ಏಳನೆ ಒಂದು ಅಂಶ ಮಾತ್ರ. ಇಲ್ಲಾದರೆ ಏಳು

ಪಟ್ಟು ಹೆಚ್ಚು. ಕೆಲಸ ಆದ್ದು ನೋಡಿದರೆ, ಅಲ್ಲಿಗಿಂತ ಏಳು ಪಟ್ಟಿ ಹಣವನ್ನು ಇಲ್ಲಿದೆ ಇಟ್ಟು, ಮತ್ತೆ ಎರಡು ಪಟ್ಟು ಹೆಚ್ಚಿನ ಕೆಲಸ ಇಲ್ಲಿ ಮಾಡಿದ್ದಾರೆ. ಏಳು ವರ್ಷಗಳ ಅಂಕಿಸಂಖ್ಯೆಗಳನ್ನು ತಾವೇ ಇಲಾಖೆಯಿಂದ ತರಿಸಿ, ತಮ್ಮ ವರದಿಯಲ್ಲಿ ಇದನ್ನು ಕೊಟ್ಟಿದ್ದೇವೆ. ತಮಗೆ ಸಂಪೂರ್ಣ ಗೊತ್ತಿದೆ. ಆ ಕಡೆ ಮಾಡಿಕೊಳ್ಳಿ ಎಂದು ಹೇಳುವುದನ್ನು ಬಿಡಿ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಅಲ್ಲಿ ನೀರಾವರಿ ಅಭಿವೃದ್ಧಿಯಾಗಿಲ್ಲ. ಬೇರೆ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಮಾಡತಕ್ಕಂಥ ಅವಶ್ಯಕತೆ ಇದೆ. ಅದನ್ನು ಮಾಡಿ, ಇಲ್ಲಿಯೂ ಆಗತಕ್ಕದ್ದು ಇನ್ನೂ ಸಾಕಷ್ಟಿದೆ. ಇಲ್ಲಿಯೂ ಮಾಡಿರಿ ಎಂದು ತಾವು ಹೇಳಿದರೆ ಒಳ್ಳೆಯದು. ಈ ದೃಷ್ಟಿಯಿಂದ ತಾವು ಹೇಳುತ್ತೀರಿ ಎಂದು ಭಾವಿಸುತ್ತೇನೆ ತಮಗೆ ಎಲ್ಲಾ ಗೊತ್ತಿದೆಯೆಂದು ಅಂದುಕೊಂಡಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ನನಗೆ ಬೇರೆ ದೃಷ್ಟಿ ಇಲ್ಲ. ಇಡೀ ರಾಜ್ಯದಲ್ಲಿ ಬರಗಾಲ ಪ್ರದೇಶಕ್ಕೆಲ್ಲಾ ನೀರಾವರಿ ಅನುಕೂಲವಾಗಬೇಕು, ರೈತು ನೆಮ್ಮದಿಯಿಂದ ಬಾಳಬೇಕೆಂಬ ದೌಷ್ಟಿಯಿಂದಲೇ ಹೇಳಿದ್ದೇನೆ. ನಿಮ್ಮ ಏರಿಯಾದಲ್ಲಿ ಅಕಸ್ಮಾತ್ ಕೆಲಸ ಆಗದೇ ಇದ್ದರೆ, ಈಗ ಒಬ್ಬರು ಸೂಕ್ತ ಮಂತ್ರಿ ಇದ್ದಾರೆ, ಅವರು ಮಾಡುತ್ತಾರೆ. ನಮ್ಮ ಕೆಲಸವನ್ನು ಮಾಡಿಸಿಕೊಂಡ ಮೇಲೆ, ನಮ್ಮ ಕೆಲಸವನ್ನು ಮಾಡಿಸಿಕೊಳ್ಳುತ್ತೇವೆ. ನಮ್ಮ ಕೆಲಸವನ್ನು ಇವತ್ತೇ ಮಾಡಬೇಕಾಗಿಲ್ಲ ಅಗ್ರಿಕಲ್ಚರ್ ಕಾಲೇಜು ಮಾಡುವುದರ ಬಗ್ಗೆ ಹೇಳಬೇಕಾಗಿದೆ. ಆದರೆ, ನನಗೆ ರಾತ್ರಿಯಲ್ಲಾ ಹುಷಾರ ಇಲ್ಲದೇ ಇದ್ದುದ್ದರಿಂದ ಸುಸ್ತಾಗಿರುತ್ತೇನೆ. ಆದರೂ ಜನಗಳಿಗೆ ಕೆಲಸವಾಗಲಿ ಎನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಮಡೇನೂರಿನಲ್ಲಿ ಸೂಕ್ತವಾದ ಜಾಗ, ಅಗ್ರಿಕಲ್ಚರ್ ಕಾಲೇಜು ಮಂಜೂರು ಮಾಡಿದ್ದೀರಿ. ಇಲ್ಲಿ ಕಾಲೇಜು ಬಂತು, ನಮ್ಮ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸ ಸಿಗುತ್ತೇ, ಕೆಲಸವಂತೂ ಸಿಗುವುದಿಲ್ಲ. ಹೇಗೋ ರೈತರು ಉಪ ಕಸುಬು ಮಾಡಿಕೊಂಡು ಬಾಲಿ ಬದುಕುತ್ತಾರೆಂದು ಸಂತೋಷಪಟ್ಟಿದ್ದೆವು. ಆದರೆ, ನೀವು ಅಲ್ಲಿ ಕೊಟ್ಟಿದ್ದೀರಿ, ಇಲ್ಲಿ ತಂದು ಇಟ್ಟಿದ್ದೀರಿ. ಅದನ್ನು ಯಾವ ಪುರುಷಾರ್ಥಕ್ಕೆ ಮಾಡಿದ್ದೀರೋ ಗೊತ್ತಿಲ್ಲ. ದಯವಿಟ್ಟು ಆದಷ್ಟು ಜಾಗ್ರತೆ ಅಲ್ಲಿ ಮಾಡಿರಿ. ನಾಲ್ಕಾರು ಹೊಸ ಹೊಸ ವಿಷಯಗಳನ್ನು ಇಂಟ್ರಡ್ಯೂಸ್ ಮಾಡಿ. ಅದೇ ರೀತಿ ಈ ರಾಜ್ಯದಲ್ಲಿ ಇನ್ನೂ ನಾಲ್ಕೈದು ಕಾಲೇಜುಗಳನ್ನು ಮಾಡಿ. ಕೊನೇಪಕ್ಷ ಅಲ್ಲಿ ಓದಿದವರು ನಿಮ್ಮನ್ನು ಕೆಲಸಕ್ಕೆ ಕೇಳಲು ಬರುವುದಿಲ್ಲ. ಎಂ.ಎ., ಎಂ.ಎಸ್ಸಿ, ಬಿ.ಎ. ಬಿ.ಎಸ್ಸಿ ಇವುಗಳನ್ನು ಸ್ವಲ್ಪ ಸ್ಟಾಪ್ ಮಾಡಿ. ಆ ಕಾಲೇಜು ಯಾವಾಗ ಅಲ್ಲಿಗೆ ಷಿಫ್ಟ್ ಮಾಡುತ್ತೀರಾ ಎಂಬುದನ್ನು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ :— ನಾಳೆ ಉತ್ತರ ಕೊಡುವಾಗ ನಿಮಗೆ ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ಹೇಳಿರತಕ್ಕ ಕೆಲವು ವಿಚಾರಗಳ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು.

ನಾನು ದ್ವೇಷದಿಂದ, ದುರಭಿಪ್ರಾಯದಿಂದ ಹೇಳಿಲ್ಲ. ಒಳ್ಳೆಯದಾಗಲೀ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ ರೈತರ ಹಿತದೃಷ್ಟಿಯಿಂದ ಇಡೀ ರಾಜ್ಯಕ್ಕೆ ಉತ್ತಮವಾದ ಕೆಲಸಗಳನ್ನು ಮಾಡಿ. ಮಾನ್ಯ ಕೃಷಿ ಸಚಿವರೂ ಕೂಡ, ಬೆಳೆಗಳಿಗೆ ಬಂದಿರತಕ್ಕ ಖಾಯಿಲೆಗಳನ್ನು ಸರಿಮಾಡಲಿ. ಈ ಸರ್ಕಾರದಲ್ಲಿ ಉತ್ತಮವಾದ ಕೆಲಸವಾಗುತ್ತಾ ದೆ. ಒಂದೇ ದೋಷವೆಂದರೆ, ಡಕಾಯಿತಿಗಳನ್ನು ಹಿಡಿಯುತ್ತಾ ಇಲ್ಲ. ಅವರನ್ನು ಹಿಡಿದರೆ ಎಲ್ಲವೂ ಸರಿಯಾಗುತ್ತದೆ. ಇಷ್ಟು ಹೇಳಿ, ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :— ಮಾನ್ಯ ಅಧ್ಯಕ್ಷರೇ, ಇವತ್ತು ಕೃಷಿ ಬೇಡಿಕೆಗಳ ಮೇಲೆ ಮೊದಲನೆಯದಾಗಿ ನಾವು ಕಳೆದ ನಾಲ್ಕೈದು ದಿವಸಗಳಿಂದ ಮಾಡಿದಂಥ ಧರಣಿಗಳು, ಇವೆಲ್ಲಾ ಹಿನ್ನಲೆಯಲ್ಲಿ ಇವತ್ತು ಸರ್ಕಾರ ನಮ್ಮ ಕೇಳಿಕೆಗಳನ್ನು ಮನ್ನಿಸಿದೆ. ಅದು ಕುಡಿಯುವ ನೀರು ಇರಬಹುದು ಮತ್ತು ಪಂಪುಸೆಟ್ಟಿಗೆ 25 ಸಾವಿರ ಇಲ್ಲದೇ ಮಾಡುವುದು.ಪುಲಿಕೇಶಿ ಪಡೆಯನ್ನು ನಿಲ್ಲಿಸುವುದು, ಇಂತಹ ಕೆಲವು ಕಾರ್ಯಕ್ರಮಗಳನ್ನು ಪ್ರಕಟ ಮಾಡಿದ್ದೀರಿ ಇದರ ಜೊತೆಗೆ ಬಡ್ಡಿ ಮನ್ನಾ ಮಾಡುವುದನ್ನೂ ಕೂಡ ನೀವು ಮೊನ್ನೆ ಹೇಳಿದ್ದು, ಡಿಸೆಂಬರ್ 14 ತಾರೀಖಿನವರೆಗೂ ಒಂದೇ ಸಾರಿ ಕೊಟ್ಟರೆ ಬಡ್ಡಿ ಮನ್ನಾ ಮಾಡುತ್ತಾರೆಂದು. ನಾನು ಆಗಲೇ ಮಾತನಾಡಲಿಲ್ಲ. ನಬಾರ್ಡ್‌ನಿಂದ ಒಂದು ಸುತ್ತೋಲೆ ಬಂದಿದೆ, ಇದು ತಮಗೆ ಗೊತ್ತಿದೆಯೋ ಇಲ್ಲವೋ. ಮಾರ್ಚ್ 2002 ರವರೆಗೂ ಕೂಡ ಅಸಲು ಕಟ್ಟಿದರೆ ಬಡ್ಡಿ ಮನ್ನಾ ಆಗುತ್ತದೆ. ಇದೇನು ನಮ್ಮ ಸರ್ಕಾರದಿಂದ ಮಾಡಿದ್ದಲ್ಲ, ಅಲ್ಲಿಂದಲೇ ಬಂದಿದೆ. ಮಾರ್ಚ್ 2002 ರವರೆಗೂ ಕೂಡ ಅಸಲು ಕಟ್ಟಿದರೆ, ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಆಗುತ್ತದೆ. ನಾಳೆ ಬೆಳಿಗೆ ಆ ಆರ್ಡರನ್ನೂ ಕೂಡ ನಿಮಗೆ ತೋರಿಸಲಿಕ್ಕೆ ಇಚ್ಛಿಪಡುತ್ತೇನೆ. ಇದನ್ನೂ ನೀವು ಹೇಳಬಹುದಿತ್ತು. ಆದೆ ಆಗಸ್ಟ್ 14ರವರೆಗೆ ನಾವು ಕೊಡುವುದು ಎಂದು ಹೇಳುತ್ತೀರಿ, ಇದು ಯಾವ ನ್ಯಾಯ? ದೊಡ್ಡದೇವರೇ ವರ ಕೊಟ್ಟರೆ, ಈ ಸಣ್ಣ ದೇವರು ಏಕೆ ವರ ಕೊಡುವುದಿಲ್ಲ? ಇದನ್ನೂ ಕೂಡ ನೀವು ಅರ್ಥ ಮಾಡಿಕೊಳ್ಳಿ. ನೀವು ಏಕೆ ತಪ್ಪ ಮಾಹಿತಿ ಕೊಡುತ್ತೀರಿ? ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು. 14ನೇ ತಾರೀಖಿನವರೆಗೆ ಎಂದು ಹೇಳಿದರು. ಆದರೆ ಮಾರ್ಚ್ 2002ರ ವರೆಗೆ ಎಂದು ನಬಾರ್ಡ್ ನವರ ಸುತ್ತೋಲೆ ಇದೆ. ಏತಕ್ಕಾಗಿ ಹೀಗೆ ಹೇಳಿದರೋ ನನಗಂತೂ ಅರ್ಥವಾಗುವುದಿಲ್ಲ. ಮತ್ತೆ ನಾಳೆಯಾದರೂ ಕೂಡ ಈ ಸುತ್ತೋಲೆಯನ್ನು ಸರ್ಕಾರದವರು ನೋಡಬೇಕು.

ಚೇರ್ಮನ್ :— ಈಗ ಸದನವನ್ನು ಪುನ: ನಾಳೆ ಬೆಳಿಗ್ಗೆ 10-30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6-30ಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ:24-7-2001 ರಂದು ಬೆಳಿಗ್ಗೆ 10-30ಕ್ಕೆ ಸೇರಲು ನಿರ್ಧರಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.